೯ನೇ ಇಯತ್ತೆಗಳ ಫಲಿತಾಂಶಗಳನ್ನು ಪ್ರಕಟಿಸಲು ಏರ್ಪಾಡು ಮಾಡಿದರು. ಅದರಂತೆ ಫಲಿತಾಂಶ ಗಳನ್ನು ಪ್ರಕಟಿಸಲಾಯಿತು. ಹಿಂದಿನ ಮುಖ್ಯೋಪಾಧ್ಯಾಯರನ್ನು ಈ ನಿರ್ಲಕ್ಷ್ಯತನದ ಬಗ್ಗೆ ವಿಚಾರಣೆ ಕಾಯ್ದಿರಿಸಿ ವರ್ಗ ಮಾಡಲಾಗಿದೆ. ಅವರ ಬದಲು ಹೊಸ ಮುಖ್ಯೋಪಾಧ್ಯಾಯರು ಕೆಲಸದ ಮೇಲೆ ಹಾಜರಾಗಿದ್ದಾರೆ. ಅಧ್ಯಾಪಕರುಗಳ ವೇತನ ಪಾವತಿಗೆ, ಮತ್ತು ಸಂಸ್ಕೃತ ಕನ್ನಡ ಹಾಗೂ ಜೀವ ಶಾಸ್ತ್ರಗಳ ಖಾಲಿಯಿದ್ದ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡಲು ಏರ್ಪಾಡು ಮಾಡಲಾಗಿದ್ದು ಉಪಾಧ್ಯಾಯರುಗಳು ಈಗ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ಆ ಶಾಲೆ ಯಲ್ಲಿ ಸಾಕಷ್ಟು ಉಪಾಧ್ಯಾಯರುಗಳಿದ್ದಾರೆ ಹಿಂದಿನ ಮುಖ್ಯೋಪಾಧ್ಯಾಯರ ವಿರುದ್ಧ ಕ್ರಮಕೈಗೊಳ್ಳ ಲಾಗುತ್ತಿದೆ,

ಶ್ರೀ ಕೆ. ಬಿ. ಮಲ್ಲಪ್ಪ —ಅಲ್ಲಿನ ಮುಖ್ಯೋಪಾಧ್ಯಾಯರು ಸರಿಯಾಗಿ ಕೆಲಸ ಮಾಡದೆ ಅವರ ಒಂದು ನಿರ್ಲಕ್ಷ್ಯತನದಿಂದ ಈ ರೀತಿ ತೊಂದರೆಯಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಆದರೆ ಇವರು ವಿದ್ಯಾ ಇಲಾಖೆಯ ಕಮೀಷನರ್ ಅವರಿಗೆ ಜಾಯಿಂಟ್ ಡೈರೆಕ್ಟರ್ ಅವರಿಗೆ ಜೀವಶಾಸ್ತ್ರ, ಗಣಿತ ಸಂಸ್ಕೃತ ಹಾಗೂ ಕನ್ನಡದ ವಿಷಯಗಳನ್ನು ಹೇಳಿಕೊಡಲು ಉಪಾಧ್ಯಾಯರುಗಳು ಇಲ್ಲದ ಕಾರಣ ಕೂಡಲೇ ಈ ಜಾಗಗಳನ್ನು ಭರ್ತಿ ಮಾಡಬೇಕೆಂದು ತಿಂಗಳಿಗೆ ಎರಡರಂತೆ ಸುಮಾರು ೧೩ ಕಾಗದಗಳನ್ನು ಬರೆದರೂ ಸಹ ಈ ಅಧಿಕಾರಿಗಳು ಇದರ ಬಗ್ಗೆ ನಿಗಾ ಕೊಡಲಿಲ್ಲ ಈ ಕಾಗದಗಳ ಕಾಪಿ ನನ್ನ ಹತ್ತಿರವೂ ಇದೆ. ಈಗ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಫಲಿತಾಂಶವನ್ನು ಪ್ರಕಟ ಮಾಡಲಾಯಿತೆಂದು ಹೇಳಿದರು. ಪರೀಕ್ಷೆಯನ್ನೇ ನಡೆಸದೆ ಫಲಿತಾಂಶವನ್ನು ಯಾವ ರೀತಿ ಪ್ರಕಟ ಮಾಡಲಾಯಿತು ? ಎಲ್ಲರಿಗೂ ಎಗ್ಜಮ್ಷನ್ ಏನಾದರೂ ಕೊಡಲಾಯಿತೇ ಹೇಗೆ ? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗಾಗಲೇ ಹೇಳಿದಂತೆ ತಡೆಹಿಡಿಯಲಾಗಿದ್ದ ಫಲಿ ತಾಂಶವನ್ನು ಪ್ರಕಟ ಮಾಡಿದ್ದಾರೆ. ಈ ತರಗತಿಗಳಲ್ಲಿದ್ದ ಮಕ್ಕಳಿಗೆ ಮುಂದಿನ ತರಗತಿಗಳಿಗೆ ಹೋಗು ವುದಕ್ಕೆ ಏರ್ಪಾಡು ಮಾಡಲಾಗಿದೆ. ಅಲ್ಲಿನ ಮಕ್ಕಳಿಗೆ ಇಷ್ಟೆಲ್ಲಾ ತೊಂದರೆಯಾಗಲು ಕಾರಣವೇನೆಂದರೆ, ಅಲ್ಲಿದ್ದ ಹೆಡ್-ಮಾಸ್ಟರ್ ಅವರನ್ನು ಕಳೆದ ಡಿಸೆಂಬರ್ ತಿಂಗಳಲ್ಲಿ ವರ್ಗ ಮಾಡಿದಾಗ ಮತ್ತು ಅವರ ಜಾಗಕ್ಕೆ ಹೋದಂಥ ಬೇರೆ ಹೆಡ್-ಮಾಸ್ಟರಗೆ ಚಾರ್ಜ್ ಕೊಡದೇ ಅದೇ ಹುದ್ದೆಯಲ್ಲಿ ಮುಂದುವ ರೆದರು. ಬೇರೆಯವರಿಗೆ ಚಾರ್ಜ್ ಕೊಡಬೇಕೆಂದು ಪತ್ರಗಳನ್ನು ಬರೆದರೂ ಸಹ ಅವರು ಅದರಂತೆ ನಡೆದುಕೊಳ್ಳಲಿಲ್ಲ. ಹೀಗಾಗಿ ಅವರನ್ನು ಸಸ್ಪೆಂಡ್ ಮಾಡಲಾಯಿತು. ನಂತರ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತಂದರು. ಇಷ್ಟೆಲ್ಲಾ ಆದಮೇಲೆ ತಾ॥ ೨-೭-೧೯೮೨ ರಲ್ಲಿ ಅಲ್ಲಿಗೆ ಬೇರೆ ಒಬ್ಬರನ್ನು ಪೋಸ್ಟ್ ಮಾಡಿ ಬಲವಂತವಾಗಿ ಚಾರ್ಜ್ ಕೊಡುವುದಕ್ಕೆ ಏರ್ಪಾಡು ಮಾಡಲಾಗಿದೆ ಮತ್ತು ಇನ್ನಿತರ ಖಾಲಿ ಇದ್ದ ಹುದ್ದೆಗಳನ್ನು ಸಹ ಭರ್ತಿ ಮಾಡಿದ್ದೇವೆ.

FINANCIAL BUSINESS

re: Discussion and Voting af Demands for Grants for 1982–83 Demand Nos. 4, 35 and 36.

ಶ್ರೀ ಬಿ. ಬಸವಲಿಂಗಪ್ಪ. (ಯಲಹಂಕ).—ಮಾನ್ಯ ಅಧ್ಯಕ್ಷರೇ, ಈ ಕಾನೂನು ಇಲಾಖೆಯ ಬೇಡಿಕೆಯ ಚರ್ಚೆಯಲ್ಲಿ ಭಾಗವಹಿಸಿ ಈ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡಬೇಕೆಂದು ನಾನು ಎದ್ದು ನಿಂತಿದ್ದೇನೆ. ೧೯೮೧-೮೨ರ ವಾರ್ಷಿಕ ವರದಿಯ ಕೊನೇ ಪ್ಯಾರಾದಲ್ಲಿ ಮಾನ್ಯ ಮಂತ್ರಿ ಯವರು ಈ ಭೂ ಸುಧಾರಣೆ ಸೆಲ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಪ್ರಸ್ತಾಪ ಮಾಡಿರುವ ಪ್ರಕಾರ ಲೀಗಲ್ ಏಡ್‌ನವರು ೫೪೪೨ ಜನಗಳಿಗೆ ಸಹಾಯ ಮಾಡಿದ್ದಾರೆ. ಎಂದು ಹೇಳಿದ್ದಾರೆ ಹೈಕೋರ್ಟ್‌ನಲ್ಲಿ ಈ ಬಗ್ಗೆ ೪೧೨ ಜನರ ಕೇಸ್‌ಗಳು ಮಾತ್ರ ತೀರ್ಮಾನವಾಗಿವೆ. ಅದರಲ್ಲಿ ३೪೮ ಕೇಸುಗಳು ರಿಮ್ಯಾಂಡ್ ಆಗಿವೆ ಇದರಲ್ಲಿ ಟೆನೆಂಟ್ಸ್ ಪರವಾಗಿ ತೀರ್ಮಾನವಾಗಿರತಕ್ಕಂಥಾದ್ದು ಕೇವಲ ೧೪ ಕೇಸಸ್ ಮಾತು. ಈ ಭೂ ಸುಧಾರಣೆ ಕಾನೂನು ಪ್ರಕಾರ ಹೈಕೋರ್ಟ್‌ನಲ್ಲಿ ಈಗ ಸುಮಾರು ೩೦ ಸಾವಿರ ಕೇಸುಗಳು ಇವೆ. ಟ್ರಿಬ್ಯೂನಲ್‌ನವರು ಈ ಭೂಸುಧಾರಣೆ ಬಗ್ಗೆ ಏನು ತೀರ್ಮಾನ ಕೊಡುತ್ತಾರೆ ಅದರ ಮೇಲೆ ಹೈಕೋರ್ಟ್‌ನವರು ಅದರ ವಿರೋಧವಾಗಿಯೋ ಅಥವಾ ಪರವಾಗಿಯೋ

ತೀರ್ಮಾನ ಕೊಡತಕ್ಕಂಥಾ ಕಾಲದಲ್ಲಿ ಇಂಥಾ ಕೇಸ್‌ಗಳನ್ನು ಬೇಗನೆ ಫೈಸಲ್ ಮಾಡತಕ್ಕಂಥಾದ್ದು ವಿರಳ. ಬೇಗನೆ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಅದರಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದರೆ ಅದನ್ನು ವಾಪಸ್ಸು ಟ್ರಿಬ್ಯುನಲ್‌ಗೆ ಹಾಕಲೇ ಬೇಕು. ಇಂಥಾದ್ದು ಸುಮಾರು ೩೦ ಸಾವಿರ ಕೇಸುಗಳು ಹೈಕೋರ್ಟಿನಲ್ಲಿ ಮೊದಲಿನಿಂದಲೂ ಪೆಂಡಿಂಗ್ ಇವೆ. ಇಷ್ಟು ಕೇಸ್‌ಗಳನ್ನು ತೀರ್ಮಾನ ಮಾಡುವುದು ಯಾವಾಗ ಸರ್ಕಾರದವರು ಈ ಭೂಸುಧಾರಣೆಯನ್ನು ತಂದಿರತಕ್ಕಂಥಾ ಉದ್ದೇಶ ಏನಿದೆ ಇದರಿಂದ ಈ ಸಮಾಜದ ಬಡಜನರಿಗೆ ದೀನದುರ್ಬಲರಿಗೆ ನ್ಯಾಯ ಸಿಗಬೇಕು, ಅವರು ಆರ್ಥಿಕವಾಗಿ ಮುಂದುವರಿಯಬೇಕು ಮತ್ತು ಅವರ ಅಭಿವೃದ್ಧಿ ಆಗಬೇಕು ಎನ್ನುವ ಸದುದ್ದೇಶದಿಂದ ಇದನ್ನು ತಂದಿರುವುದು. ಆದರೆ ಈಗ ಹೈಕೋರ್ಟಿನಲ್ಲಿ ಇದುವರೆಗೆ ಇಷ್ಟು ಕೇಸ್‌ಗಳನ್ನು ಪೆಂಡಿಂಗ್ ಇಟ್ಟುಕೊಂಡಿದ್ದಾರಲ್ಲಾ ಅದನ್ನು ಫೈಸಲ್ ಮಾಡಲಿಲ್ಲಾ ಅಥವಾ ಅದನ್ನು ರಿಮ್ಯಾಂಡ್ ಮಾಡಿ ವಾಪಸು ಕೂಡ ಮಾಡಲಿಲ್ಲಾ. ಅವುಗಳನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಹೀಗಾದರೆ ಹೈಕೋರ್ಟ್‌ನಲ್ಲಿ ಈ ಜನಗಳಿಗೆ ಸಾಮಾಜಿಕ ನ್ಯಾಯ ಏನಾದರೂ ಸಿಕ್ಕುತ್ತದೆಯೇ ಎಂದು ನಂಬೋಣವೇ? ಇದರಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಎಂದರೆ ಈ ಲ್ಯಾಂಡ್‌ರೀಫಾರಂಸ್‌ನಲ್ಲಿ ಏನು ಇದೆ ಅದನ್ನಾದರೂ ಸ್ಪಷ್ಟವಾಗಿ ಹೇಳಿ ನನ್ನ ಅಭಿಪ್ರಾಯದ ಪ್ರಕಾರ ಆ ಕೇಸ್‌ಗಳನ್ನೆಲ್ಲಾ ಅತಿ ಜಾಗ್ರತೆಯಾಗಿ ತೀರ್ಮಾನ ಮಾಡಬೇಕು. ಆದರೆ ಇದನ್ನು ಹಾಗೆಯೇ ಇಟ್ಟುಕೊಂಡಿರುವುದನ್ನು ನೋಡಿದರೆ ಅವರು ಈ ಕೇಸ್‌ಗಳನ್ನು ಸರಿಯಾಗಿ ತೆಗೆದುಕೊಳ್ಳುತ್ತಾ ಇಲ್ಲ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಲ್ಯಾಂಡ್ ರೀಫಾರಂಸ್ ಬಗ್ಗೆ ಅವರಿಗೆ ನಿಜವಾಗಿ ಕಳಕಳಿ ಇದ್ದರೆ ಲ್ಯಾಂಡ್ ರೀಫಾರಂಸ್ ಸ್ಪೆಷಲ್ ಬೆಂಚ್ ಎಂದು ಮಾಡಿ ಬೇಗನ ಆ ಕೇಸ್‌ಗಳನ್ನು ತೀರ್ಮಾನ ಮಾಡಲಿ, ಅವರು ಅದನ್ನೂ ಮಾಡಲಿಕ್ಕೆ ಹೋಗುವುದಿಲ್ಲ. ಯಾವ ಕಾಲಕ್ಕೋ ಯಾವುದೋ ಒಂದು ಕೇಸನ್ನು ತೆಗೆದುಕೊಂಡು ತೀರ್ಮಾನ ಮಾಡುವುದು, ಅಥವಾ ವಾಪಸ್ಸು ಹಾಕುವುದು, ಇಲ್ಲವೇ ಒಂದು-ಎರಡು ಕೇಸಗಳನ್ನು ತೀರ್ಮಾನ ಮಾಡುವುದು ಹೀಗೆ ಮಾಡಿ ಸುಮ್ಮನೆ ಕಾಲ ವಿಳಂಬ ಮಾಡುತ್ತಾ ಹೋದರೆ, ಈ ಜನಗಳಿಗೆ ಸಾಮಾಜಿಕ ನ್ಯಾಯ ದೊರೆಯುವುದಾದರೂ ಹೇಗೆ? ಇದು ಒಂದು ಪ್ರಶ್ನೆಯಾಗಿದೆ.

ಇನ್ನು ಎರಡನೇ ಪ್ರಶ್ನೆ ಏನೆಂದರೆ ಸುಮಾರು ೮ ಲಕ್ಷ ೧೬ ಸಾವಿರ ಅರ್ಜಿಗಳಲ್ಲಿ ೪ ಲಕ್ಷ ೬೦ ಸಾವಿರ ಅರ್ಜಿಗಳನ್ನು ಲ್ಯಾಂಡ್ ಟ್ರಿಬ್ಯುನಲ್‌ನವರು ತೀರ್ಮಾನ ಮಾಡಿದ್ದಾರೆ. ಅದರಲ್ಲಿ ೩೦ ಸಾವಿರ ಅರ್ಜಿಗಳು ಹೈಕೋರ್ಟಿಗೆ ಹೋಗಿದೆ ಎಂದರೆ ಟ್ರಿಬ್ಯುನಲ್‌ನಲ್ಲಿರತಕ್ಕಂಥ ಸದಸ್ಯರು ಏನು ಇದ್ದಾರೆ ಅವರು ಇದರಲ್ಲಿ ಸರಿಯಾಗಿ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ ಎಂದು ಇದರಿಂದಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಇರುವವರು ಖಾಸಗೀ ಮತ್ತು ಅಸಿಸ್ಟೆಂಟ್ ಕಮೀಷನರು. ಈ ಸದಸ್ಯರು ಆ ಜನಗಳಿಗೆ ಏನು ನ್ಯಾಯ ದೊರಕಿಸಿಕೊಟ್ಟಿದ್ದಾರೆ ಅದನ್ನು ನೋಡಿದರೆ ಬಹುಸಂಖ್ಯೆಯಲ್ಲಿ ಜನರಿಗೆ ನ್ಯಾಯ ದೊರೆತಿರುವುದನ್ನು ನೋಡಿದರೆ, ಇವರ ತೀರ್ಮಾನ ಸರಿಯಾದುದ್ದು ಎಂದು ಎಲ್ಲರಿಗೂ ಅರ್ಥವಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ೪ ಲಕ್ಷ ೬೦ ಸಾವಿರ ಕೇಸ್‌ಗಳಲ್ಲಿ ಹೈಕೋರ್ಟಿಗೆ ಹೋಗಿರುವುದು ಕೇವಲ ೩೦ ಸಾವಿರ ಕೇಸ್‌ಗಳು ಮಾತ್ರ ಅವೆಲ್ಲಾ ಹೈಕೋರ್ಟ್ ಮುಂದೆ ಇವೆ.

ಶ್ರೀ ಕೆ. ಪ್ರಭಾಕರ್.—ಇನ್ನೂ ಜಾಸ್ತಿ ಇವೆ, ೩೮ ಸಾವಿರ ಅರ್ಜಿಗಳು ಇವೆ.

ಶ್ರೀ ಬಿ ಬಸವಲಿಂಗಪ್ಪ.—೩೮ ಸಾವಿರ ಅರ್ಜಿಗಳು ಇವೆ ಅಂತಲೇ ತಿಳಿದುಕೊಳ್ಳೋಣ. ಆದರೂ ಟ್ರಿಬ್ಯುನಲ್‌ನವರು ಬಹುಸಂಖ್ಯೆಯಲ್ಲಿ ತೀರ್ಮಾನ ಕೊಟ್ಟಿರುವುದರಿಂದ ಇದು ಹೈಕೋರ್ಟಿಗಿಂತಲೂ ಸರ್ವಸಮ್ಮತವಾದುದು ಎಂದು ನಾವು ತಿಳಿದುಕೊಳ್ಳುವುದಕ್ಕೆ ಸಾಧ್ಯ. ಆದರೆ ನಾನು ಹೈಕೋರ್ಟು ಇರಬೇಕೇ, ಬೇಡವೇ ಅನ್ನುವ ಪ್ರಶ್ನೆಗೆ ಹೋಗುವುದಿಲ್ಲ. ಆದರೆ ಸಮಾಜಕ್ಕೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಈ ಟ್ರಿಬ್ಯುನಲ್‌ನಲ್ಲಿ ಸಮಾಜದ ಪ್ರತಿನಿಧಿಗಳು ಇದ್ದಾರೆ ಅವರು ಸರಿಯಾಗಿ ಇದರಲ್ಲಿ ನ್ಯಾಯ ಒದಗಿಸಿ ಕೊಟ್ಟಿದ್ದಾರೆ. ಹೈಕೋರ್ಟಿಗಿಂತಲೂ ಬಹಳಷ್ಟು ಸಮಂಜಸವಾಗಿ ಇವರು ನ್ಯಾಯ ಒದಗಿಸಿಕೊಟ್ಟಿದ್ದಾರೆ ಅನ್ನುವುದು ತಾವು ಕೊಟ್ಟಿರತಕ್ಕಂಥ ಅಂಕಿಅಂಶಗಳಿಂದಲೇ ನಾವು ತಿಳಿದುಕೊಳ್ಳಬಹುದು.

ಇನ್ನು ಹೈಕೋರ್ಟಿನಲ್ಲಿ ಪೆಂಡಿಂಗ್ ಕೇಸುಗಳು ಎಷ್ಟು ಇವೆ ಎಂದರೆ, ಒಟ್ಟು ೧ ಲಕ್ಷ ೨೦ ಸಾವಿರ ಕೇಸ್‌ಗಳು ಇವೆ ಎಂದು ಹೇಳಿದ್ದಾರೆ ಇದರಲ್ಲಿ ೩೮ ಸಾವಿರ ಕೇಸ್‌ಗಳು ಭೂ ಸುಧಾರಣೆಗೆ ಸಂಬಂಧಪಟ್ಟಿದೆ. ಈಗ ಇತ್ಯರ್ಥವಾಗದೇ ಇರುವ ೧ಲಕ್ಷ ೨೦ ಸಾವಿರ ಕೇಸ್‌ಗಳು ಏನೂ ಇದೆ. ಇವುಗಳನ್ನೆಲ್ಲಾ ತೀರ್ಮಾನಮಾಡುವುದು ಯಾವಾಗ ? ಅವರು ಇವುಗಳನ್ನು ತೀರ್ಮಾನ ಮಾಡತಕ್ಕಂಥಾ ಬಗೆ ಹೇಗೆ ?

ನಾನು ಈ ಮಾತನ್ನು ಬಹಳ ಮನನೊಂದು ಹೇಳುತ್ತಿದ್ದೇನೆ. ಈ ಹೈಕೋರ್ಟ್‌ನಲ್ಲಿರತಕ್ಕಂಥಾ ಜನಗಳು ಏನು ಇದ್ದಾರೆ ಅವರು ಒಂದೊಂದು ಕೇಸನ್ನು ಒಂದೊಂದು ತಿಂಗಳು ಹಿಯರಿಂಗ್ ಮಾಡುತ್ತಾರೆ. ಲಾಯರ್ಸ್ ಏನು ಕೇಳುತ್ತಾರೋ ಜಡ್ಜ್‌ಸ್ ಏನು ಹೇಳುತ್ತಾರೋ ನನಗಂತೂ ಅರ್ಥವಾಗುವುದಿಲ್ಲ.

Mr. Speaker.—No aspersions on how they argue and how they hear.

Sri B. Basavalingappa.—It is not aspersion. I am talking about the administration of Justice and the Court.

ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅವರು ಒಂದೊಂದು ತಿಂಗಳಿಗೆ ಒಂದೊಂದು ಕೇಸನ್ನು ತೀರ್ಮಾನ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಈಗ ಹಾಲಿ ಹೈಕೋರ್ಟಿನಲ್ಲಿ ೧ ಲಕ್ಷ ೨೦ ಸಾವಿರ ಪೆಂಡಿಂಗ್ ಕೇಸಸ್ ಏನು ಇವೆ ಇವನ್ನು ಯಾವ ಕಾಲಕ್ಕೆ ತೀರ್ಮಾನ ಮಾಡುತ್ತಾರೆಂದು ನಾವು ಭಾವಿಸೋಣ ? ೩೦ ದಿನಗಳೂ ಒಂದೇ ಕೇಸನ್ನು ಹಿಯರಿಂಗ್ ಮಾಡಿದರೆ ಇದನ್ನು ಯಾವ ಕಾಲಕ್ಕೆ ಮುಗಿಸುತ್ತಾರೆ. ಈ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ಇಷ್ಟಿಷ್ಟು ದಿವಸದಲ್ಲಿ ಇಷ್ಟು ಕೇಸ್‌ಗಳನ್ನು ತೀರ್ಮಾನ ಮಾಡಬೇಕು ಎನ್ನುವ ನಿರ್ದೇಶನವನ್ನು ಹೈಕೋರ್ಟ್‌ನವರು ಕೊಟ್ಟಿದ್ದಾರೆ ಅಂತ ಇದೆ. ಅದಕ್ಕೆ ನಾನು ಈ ಮಾತು ಹೇಳುತ್ತಿದ್ದೇನೆ. ಯಾರಿಗೆ ನೀವು ನಿರ್ದೇಶನ ಕೊಟ್ಟಿದ್ದೀರೋ ಗೊತ್ತಾಗಲಿಲ್ಲ. ಒಂದು ವೇಳೆ ಈ ನಿರ್ದೇಶನವನ್ನು ಹೈಕೋರ್ಟ್‌ನವರು ಕೊಟ್ಟಿದ್ದಾರೋ ಅಥವಾ ನೀವೇ ಕೊಟ್ಟಿದ್ದೀರೋ ? ಯಾರು ಈ ಒಂದು ನಿರ್ದೇಶನ ಕೊಟ್ಟಿದ್ದಾರೋ ಅವರಿಗೆ ಇದು ಅನ್ವಯವಾಗಲೇ ಬೇಕು ಎಂದು ನಾನು ಹೇಳುತ್ತೇನೆ. ಈಗ ಒಂದು ಉದಾಹರಣೆ ಹೇಳುವುದಾದರೆ ಈಗ ಆಡಳಿತದಲ್ಲಿ ಸರ್ವಿಸ್ ಮ್ಯಾಟರ್ಸ್ ಅಂತ ಇದೆ. ಅದರಲ್ಲಿ ಯಾರಿಗೆ ಪ್ರಮೋಷನ್ ಆಗಬೇಕು, ಯಾರಿಗೆ ಪ್ರಮೋಷನ್ ಆಗುವುದಿಲ್ಲ ಎನ್ನುವ ವಿಚಾರ ಬರುತ್ತದೆ. ಇದರ ಬಗ್ಗೆ ಯಾವುದಾದರೂ ಒಂದು ವಿಚಾರ ಬಂದಾಗ ಒಂದು ತಿಂಗಳು ಅದನ್ನೇ ವಿಚಾರಣೆ ಮಾಡಿ ಅದನ್ನು ಕೇಳಿಕೊಂಡು ಸುಮ್ಮನೆ ಇರತಕ್ಕಂಥಾ ನ್ಯಾಯಾಧೀಶರೂ ಸಹ ಇದ್ದಾರೆ, ಅವರಿಗೆ ನಾವೇನೋ ಕೆಲಸ ಕೊಟ್ಟಿದ್ದೇವೆ. ಆದರೆ ಅವರು ಕೆಲಸ ಮಾಡುತ್ತಿರುವುದು ಹೀಗೆ. ಹೀಗೆ ನಾನು ಹೇಳಿದ ಮಾತ್ರಕ್ಕೆ ಅವರನ್ನು ದಡ್ಡರೂ ಅಂತಲೂ ಹೇಳುವುದಿಲ್ಲ. ಜಾಣರೂ ಅಂತಲೂ ಹೇಳುವುದಿಲ್ಲ. ಏನೋ ಕೆಲಸ ಮಾಡುತ್ತಾರೆ. ಆ ಕೇಸ್‌ಗಳೂ ಕೂಡ ಇದೇ ರೀತಿ ಮುಂದುವರೆಯುತ್ತಾ ಇರುತ್ತದೆ. ಹೀಗಾದರೆ ದೇಶಕ್ಕೆ ಏನಾದರೂ ನ್ಯಾಯ ಸಿಕ್ಕುತ್ತದೆಯೋ ಎನ್ನುವ ಪ್ರಶ್ನೆ ಬರುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ ಹೀಗೆ ನ್ಯಾಯಾಧೀಶರು ಕೆಲಸ ಮಾಡಿದರೆ ಸಾರ್ವಜನಿಕರು ಈ ಕೋರ್ಟ್ ಬಗ್ಗೆ ಏನು ಒಂದು ನ್ಯಾಯ ಸಿಕ್ಕುತ್ತದೆ ಅಂತ ನಿರೀಕ್ಷಣೆ ಇಟ್ಟುಕೊಂಡಿದ್ದರೋ, ಈ ಕೋರ್ಟಿನಲ್ಲಿ ಏನು ಒಂದು ನಂಬಿಕೆ ಇಟ್ಟುಕೊಂಡಿದ್ದರೋ ಅದು ಇವೊತ್ತಿನ ದಿವಸ ಇಲ್ಲವಾಗಿದೆ. ನ್ಯಾಯವಾದಿಗಳೂ ಕೂಡ ಈ ಕೋರ್ಟ್‌ಗಳಲ್ಲಿ ಸಾರ್ವಜನಿಕರ ಬಗ್ಗೆ ನ್ಯಾಯ ದೊರಕಿಸಿ ಕೊಡಲು ಏನು ಕೆಲಸ ಮಾಡಬೇಕೋ ಆ ರೀತಿ ಕೆಲಸ ಮಾಡುತ್ತಾ ಇಲ್ಲ. ಆದ್ದರಿಂದ ಸಾರ್ವಜನಿಕರು ಈ ಕೋರ್ಟ್ ಬಗ್ಗೆ ಮತ್ತು ಲಾಯರ್ ಬಗ್ಗೆ ನಮಗೆ ಒಂದು ನ್ಯಾಯ ಸಿಕ್ಕುತ್ತದೆ ಎಂದು ಏನು ಒಂದು ನಿರೀಕ್ಷಣೆ ಇಟ್ಟುಕೊಂಡಿದ್ದರೋ ಈಗಿನ ಪರಿಸ್ಥಿತಿಯಲ್ಲಿ ಅವರಿಗೆ ನಂಬಿಕೆ ಇಲ್ಲವಾಗಿದೆ. ಇವೊತ್ತಿನ ದಿವಸ ಸುಪ್ರೀಂ ಕೋರ್ಟಿನ ಬಗ್ಗೆ ಮತ್ತು ಜಡ್ಜಸ್ ಮೇಲೆ ಟೀಕೆ ಟಿಪ್ಪಣಿಗಳು ಬರುತ್ತಾ ಇವೆ. ಅನೇಕರು ವಿರೋಧವಾಗಿ ಮಾತನಾಡುತ್ತಿದ್ದಾರೆ. ಅನೇಕರು ಪರವಾಗಿಯೂ ಮಾತನಾಡುತ್ತಿದ್ದಾರೆ. ಆದರೆ ಈಗ ನ್ಯಾಯಾಲಯಗಳನ್ನು ಏನು ಸ್ಥಾಪನೆ ಮಾಡಿದ್ದೀರಿ ಅದು ಒಳ್ಳೆಯದು. ಇದನ್ನು ಸ್ಥಾಪನೆ ಮಾಡುವುದರ ಉದ್ದೇಶ ಜನಗಳಿಗೆ ನ್ಯಾಯ ದೊರಕಬೇಕು ಎನ್ನುವುದು ಮತ್ತು ಸಾರ್ವಜನಿಕರಿಗೂ ಕೂಡ ಇದರಲ್ಲಿ ನಂಬಿಕೆ ಬರಬೇಕು. ಶೀಘ್ರವಾಗಿ ಇದರಲ್ಲಿ ನ್ಯಾಯ ಸಿಗಬೇಕು ಅನ್ನುವ ಉದ್ದೇಶದಿಂದ ಸ್ಥಾಪನೆ ಮಾಡಿದ್ದೀರಿ. ಈಗ ಆ ರೀತಿಯಾಗಿ ಜನಗಳಿಗೆ ನಂಬಿಕೆ ಬರುತ್ತದೆಯೋ ಅಂತ ನಾವು ನೋಡಿದರೆ ಅಂಥಾ ನಂಬಿಕೆ ಇವೊತ್ತಿನ ದಿವಸ ಬರುವುದಿಲ್ಲ. ಇದರಲ್ಲಿ ನಂಬಿಕೆಯೋ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ನಾನು ಮಂತ್ರಿಯಾಗಿದ್ದಾಗ ಇಂಜಿನಿಯರಿಂಗ್ ಇಲಾಖೆಯಲ್ಲಿ ನಿಮ್ನವರ್ಗದವರಿಗೆ ಪ್ರಾತಿನಿಧ್ಯ ಇಲ್ಲವೆಂದು ನೋಡಿ ಅಲ್ಲಿ ೨೫ ಜನರನ್ನು ಅಸಿಸ್ಟೆಂಟ್ ಇಂಜಿನಿಯರ್ ಆಗಿ ನೇರವಾಗಿ ನೇಮಕ ಮಾಡಬೇಕೆನ್ನುವ

ವಿಷಯವನ್ನು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದೆವು. ಅದಾದಮೇಲೆ ಪಿ.ಎಸ್.ಸಿ.ಯವರು ಅರ್ಜಿಗಳನ್ನು ಕರೆದರು. ಯಾರೋ ಒಬ್ಬರು ಹೋಗಿ ಅದಕ್ಕೆ ರಿಟ್ ಹಾಕಿದರು. ಅದಕ್ಕೆ ಹೈಕೋರ್ಟ್‌ನವರು ಸ್ಟೇ ಕೊಟ್ಟಿದ್ದಾರೆ ಅದಕ್ಕೆ ತಡೆ ಆಜ್ಞೆ ಹೊರಡಿಸಿದರು. ಇದು ಆಗಿ ಮೂರು ವರ್ಷವಾಯಿತು ಇದುವರೆಗೂ ಅದನ್ನು ವಜಾ ಮಾಡಿಲ್ಲ. ಇನ್ನೂ ಹಾಗೆಯೇ ಇದೆ. ಸರ್ಕಾರದವರು ಇದನ್ನು ಯಾವ ಉದ್ದೇಶದಿಂದ ಮಾಡಿದರು? ಸಮಾಜದಲ್ಲಿ ಸರಿಯಾಗಿ ನ್ಯಾಯ ದೊರಕಬೇಕು ಅನ್ಯಾಯವಾಗಬಾರದು, ಅಸಮಂಜಸವಾಗಿ ಇರಬಾರದು ಅನ್ನುವ ಉದ್ದೇಶದಿಂದ ಮಾಡಿದ್ದು ಎಂದು ತಿಳಿದುಕೊಳ್ಳಬಾರದೇ ? ಹೈಕೋರ್ಟ್‌ನವರು ಇಷ್ಟು ಅನ್ಯಾಯ ಮಾಡಬಾರದು. ಇಷ್ಟೊಂದು ಆತಂಕಗಳನ್ನು ತಂದೊಡ್ಡಬಾರದು, ಸರ್ಕಾರದವರು ಒಂದು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಕೆಲಸ ಮಾಡಿದರೆ ಅದಕ್ಕೆ ಅಡ್ಡಿ ಮಾಡಬಾರದು. ಸರ್ಕಾರದ ಸದಿಚ್ಛೆ ಏನು ಇದೆ ಅನ್ನುವುದನ್ನು ತಿಳಿದುಕೊಂಡು ಕೆಲಸ ಮಾಡಬೇಕು. ಆದರೆ ಇವೊತ್ತಿನ ದಿವಸ ಹೈಕೋರ್ಟ್‌ನವರು ಈ ರೀತಿ ಮಾಡುವುದು ಸರಿಯಾದುದಲ್ಲ, ಅವರು ಹೀಗೆ ಮಾಡಿದರೆ ಸಮಾಜದ ಬೆಳವಣಿಗೆಗೆ ಆ ಜನರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಅದು ಸಹಾಯವಾಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ರಾಜ್ಯಾಂಗದಲ್ಲಿ ೨೨೬ ಮತ್ತು ೨೨೭ ಕಲಂಗಳು ಏನು ಇವೆ ಆ ಪ್ರಕಾರ ಯಾವ ಯಾವ ಅರ್ಜಿಗಳನ್ನು ತೆಗೆದುಕೊಳ್ಳಬೇಕು ಅಂತ ಇದೆ ಯಾವುದಾದರೂ ಒಬ್ಬ ಪೀವನ್ ಆಗಲಿ. ಯಾವನಾದರೂ ಒಬ್ಬ ಗುಮಾಸ್ತನಾಗಲಿ ಅವನನ್ನು ಟ್ರಾನ್ಸ್‌ಫರ್ ಮಾಡಿದರೆ ಅವರು ಹೋಗಿ ರಿಟ್ ಹಾಕಿಬಿಡುತ್ತಾರೆ.

ಅಧ್ಯಕ್ಷರು.—ರಾಜ್ಯಾಂಗದ ೨೨೬ ಮತ್ತು ೨೨೭ನೇ ಕಾಲಂನಲ್ಲಿ ಅದು ನಮೂದಾಗಿಲ್ಲ. ರಿಟ್ ತೆಗೆದುಕೊಳ್ಳುವುದರ ಬಗ್ಗೆ ಹಾಗೆ ಇರಬೇಕು ಹೀಗೆ ಇರಬೇಕು ಅನ್ನುವುದು ನಮೂದಾಗಿಲ್ಲ. ಹೈಕೋರ್ಟಿಗೆ ಏನು ಜ್ಯೂರಿಡಿಕ್ಷನ್ ಇದೆ ಎನ್ನುವುದು ಮಾತ್ರ ಅದರಲ್ಲಿ ಇದೆ ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ನಾನೂ ಕೂಡ ನ್ಯಾಯವಾದಿ ಆಗಿದ್ದೆ, ತಾವು ಕೂಡ ನ್ಯಾಯವಾದಿ ಆಗಿದ್ದೀರಿ. ನಾನು ಬಹಳ ದಿವಸಗಳಿಂದಲೂ ಲಾಯರ್ ವೃತ್ತಿಯನ್ನು ಮಾಡಿದ್ದೇನೆ. ಆದುದರಿಂದ ನಾನು ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ರಾಜ್ಯಾಂಗದ ೨೨೬ ಮತ್ತು ೨೨೭ ಕಲಂ ಪ್ರಕಾರ ಯಾವುದು ಕಾನೂನಿಗೆ ವ್ಯತಿರಿಕ್ತವಾಗಿದೆಯೋ ಯಾವುದರಲ್ಲಿ ವಿಚಾರಣೆಯ ನಿಯಮಗಳಷ್ಟು ಉಲ್ಲಂಘನೆಯಾಗಿದೆಯೋ ಅದು ಕ್ರಮಬದ್ಧವಾಗಿದ್ದರೆ ಅದನ್ನು ತೆಗೆದುಕೊಂಡು ತಮ್ಮ ತೀರ್ಪನ್ನು ಕೊಡಬಹುದೇ ವಿನಾ ಯಾರಾದರೂ ರಿಟ್ ಹಾಕಿದರೆ ಅದರ ಬಗ್ಗೆ ಸ್ಟೇ ಆರ್ಡರ್ ಕೊಡುವುದು ಸರಿಯಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸ್ವಾಮಿ ನಾನು ಮಂತ್ರಿಯಾಗಿದ್ದಾಗ ಒಂದು ಘಟನೆ ನಡೆಯಿತು, ಅದನ್ನು ತಮ್ಮ ಗಮನಕ್ಕೆ ತರುತ್ತೇನೆ ಅದರ ವಿಷಯ ಏನಿದೆ ಎಂದರೆ ಯಾವನೋ ಒಬ್ಬ ವಿಲೇಜ್ ಅಕೌಂಟೆಂಟ್ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಅವನನ್ನು ಟ್ರಾನ್ಸ್‌ಫರ್ ಮಾಡಿದಾಗ ಅವನು ಮಾರನೇ ದಿವಸ ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದನು.

ತಕ್ಷಣ ಮಾರನೆಯ ದಿವಸ ಅದಕ್ಕೆ ಸ್ಟೇ ಆರ್ಡರ್ ಬಂತು. ಎಕ್ಸಿಕ್ಯುಟೀವ್ ಆರ್ಡರ್ ಏನು ಇದೆ ಅದರಲ್ಲಿಯೂ ಕೂಡ ೨೨೬–೨೨೭ ಕಲಂಗಳನ್ನು ಉಪಯೋಗಿಸಿಕೊಂಡು ಸರ್ಕಾರ ಮಾಡತಕ್ಕ ಕೆಲಸ ಕಾರ್ಯಗಳಿಗೆ ಅಡ್ಡಿ ತರುವುದಾದರೆ ಸರ್ಕಾರ ಏಕೆ ಕೆಲಸ ಮಾಡಬೇಕು ? ರಾಜ್ಯಾಂಗದ ಪ್ರಕಾರ ನಾವು ಎಲ್ಲರಿಗೂ ಸಮಾನತೆಯನ್ನು ದೊರಕಿಸಿಕೊಡಬೇಕು ಎಂದು ಹೇಳುತ್ತೇವೆ. ಇಂಥ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡತಕ್ಕ ಪ್ರಯತ್ನವನ್ನು ನಾವು ಮಾಡಿದಾಗ ಕೋರ್ಟುಗಳು ಅಡ್ಡಿ ಆತಂಕಗಳನ್ನು ಮಾಡಿದರೆ ಸರ್ಕಾರ ಏನೂ ಮಾಡಲಿಕ್ಕಾಗುವುದಿಲ್ಲ. ಜನಗಳು ಬೇಸತ್ತು ಪ್ರಜಾಪ್ರಭುತ್ವದ ಮೇಲೆ ದಂಗೆ ಏಳುವುದಕ್ಕೆ ಪ್ರಯತ್ನ ಮಾಡಬಹುದು, ಕೋರ್ಟ್‌ಗಳ ಮೇಲೂ ಇದು ಆಗಬಹುದು. ಆದ್ದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ, ಆರ್ಟಿಕಲ್ ೨೨೨ರ ಪ್ರಕಾರ "The President may, after consultation with the Chief Justice of India, transfer a Judge from one High Court to any other High Court." ಎಂದು ಹೇಳಿಬಿಟ್ಟು ಇಲ್ಲಿ ಸ್ಪಷ್ಟವಾಗಿದೆ. ಇಲ್ಲಿ ಹುಟ್ಟಿ ಬೆಳೆದವರು, ಇಲ್ಲಿಯೇ ನ್ಯಾಯವಾದಿಗಳಾಗಿ ವೃತ್ತಿಯನ್ನು ಮಾಡಿ ಇಲ್ಲಿಯೂ ನ್ಯಾಯಾಧೀಶರಾಗಿದ್ದಾರೆ. ಹೀಗಾದರೆ ನಾವು, ಇವರಿಂದ ಯಾವ ಸಾಮಾಜಿಕ ನ್ಯಾಯವನ್ನು ಪಡೆಯಬಹುದು. ನಮ್ಮ ಸಮಾಜದ ಒಂದು ಜಾತಿಯಲ್ಲಿ ಹುಟ್ಟಿ ಬೆಳೆದಿದ್ದಾರೆ, ಅವರು ಜಾತೀಯ ಸಂಕೋಲೆ

ಗಳ ಸಂಪರ್ಕವನ್ನು ಇಟ್ಟುಕೊಂಡೇ ಇರುತ್ತಾರೆ, ಬಿಟ್ಟವರು ಬಹಳ ಕಮ್ಮಿ ಇಂಥವರು ಅಧಿಕಾರಿಗಳಾದರೇನು, ಜಡ್ಜ್‌ಗಳಾದರೇನು, ಅವರಿಗೆ ಜಾತೀಯ ವ್ಯಾಮೋಹ ಇದ್ದೇ ಇರುತ್ತದೆ. ಪ್ರಗತಿಗೆ ವಿರೋಧ ಮಾಡಬೇಕು ಎನ್ನುವ ಮನಸ್ಸು ಇದ್ದೇ ಇರುತ್ತದೆ. ಆದ್ದರಿಂದ ಇಲ್ಲಿಯೇ ಹುಟ್ಟಿ ಬೆಳೆದವರನ್ನು ಇಲ್ಲಿಯೇ ನ್ಯಾಯವಾದ ವೃತ್ತಿಯನ್ನು ಮಾಡಿದವರನ್ನು ಇಲ್ಲಿಯೇ ನ್ಯಾಯಾಧೀಶರನ್ನಾಗಿ ಆಗಿ ಇಟ್ಟುಕೊಂಡರೆ ನಮಗೆ ನ್ಯಾಯ ದೊರಕುವುದು ಹೇಗೆ ? ಅವರನ್ನು ನಾನು ಸ್ಪಷ್ಟವಾಗಿ ಕೇಳುತ್ತೇನೆ, ಯಾವುದೇ ಸಂಕೋಚ ಮನಸ್ಸಿನಲ್ಲಿಟ್ಟುಕೊಳ್ಳದೆ ತಕ್ಷಣ ಜಡ್ಜಮೆಂಟನ್ನು ಅವರು ಕೊಡುತ್ತಾರೆಯೇ ? ನಾನು ಇಷ್ಟೆಲ್ಲಾ ಹೇಳುವುದು ಏಕೆಂದರೆ, ಏನು ಬೇಕಾದರೂ ತೀರ್ಪುಗಳನ್ನು ಕೊಡತಕ್ಕ ಪ್ರವೃತ್ತಿ ಕೆಲವರಲ್ಲಿ ಆಗಿದೆ. ಆದ್ದರಿಂದ ಹೈಕೋರ್ಟಿನಲ್ಲಿ ಜಡ್ಜ್‌ಗಳು ಏನು ಇದ್ದಾರೆ ಅವರೆಲ್ಲರನ್ನು ಆರ್ಟಿಕಲ್ ೨೨೨ರ ಪ್ರಕಾರ ಬೇರೆ ಹೈಕೋರ್ಟಿಗೆ ವರ್ಗ ಮಾಡಿಬಿಟ್ಟು ಬೇರೆಯವರನ್ನು ಇಲ್ಲಿಗೆ ತಂದರೆ ಸರಿಯಾದ ನ್ಯಾಯ ನಮಗೆ ಸಿಗುತ್ತದೆಯೇ ವಿನಹ ಇಲ್ಲದೇ ಹೋದರೆ, ನ್ಯಾಯ ಸಿಕ್ಕುವುದಿಲ್ಲ. ವರ್ಗಾವಣೆಯ ಬಗ್ಗೆ ವಿರೋಧ ಬೇಕಾದಷ್ಟು ಇದೆ ಯಾರು ಒಂದು ಸ್ಥಳದಲ್ಲಿ ಕುಳಿತುಕೊಂಡು ಕೆಲಸ ಮಾಡಲು ಇಷ್ಟಪಡುತ್ತಾರೆ ಅವರಿಗೆ ತಕ್ಕಂಥ ನ್ಯಾಯವನ್ನು ಸಮರ್ಥನೆ ಮಾಡುವುದಕ್ಕಾಗುವುದಿಲ್ಲವೋ ಅವರು ಸನ್ನಿವೇಶದ ಒತ್ತಡದಿಂದ ಸ್ವತಂತ್ರವಾಗಿ ಕೆಲಸ ಮಾಡುವುದಿಲ್ಲ. ಅವರು ಇಲ್ಲಿಯೇ ಇರಬೇಕು ಎಂದು ಹೇಳುತ್ತಿದ್ದಾರೆ ಬೇರೆ ಹೈಕೋರ್ಟಿಗೆ ಇವರು ಹೋದರೆ ತಮ್ಮ ಸಾಮರ್ಥ್ಯವನ್ನು ತೋರಿಸಬೇಕಾಗುತ್ತದೆ, ತಮ್ಮ ವಿದ್ವತ್‌ನ್ನು ಪ್ರಭಾವವನ್ನು ಪ್ರದರ್ಶನ ಮಾಡಬೇಕಾಗುತ್ತದೆ. ಇದಕ್ಕೆ ಯಾರು ಹಿಂಜರಿಯುತ್ತಾರೋ ಅಂಥ ಜಡ್ಜ್‌ಗಳು ಇದನ್ನು ವಿರೋಧ ಮಾಡುತ್ತಿದ್ದಾರೆ. ದಯಮಾಡಿ ಈ ಜಡ್ಜ್‌ಗಳನ್ನು ಹೈಕೋರ್ಟುಗಳಿಂದ ವರ್ಗಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ತಾವು ಕಾನೂನು ಮಂತ್ರಿಗಳಾದ ಮೇಲೆ ಕೆಲವು ಸುಧಾರಣೆಗಳನ್ನು ಜಾರಿಗೆ ತಂದಿದ್ದೇವೆಂದು ಹೇಳಿದ್ದೀರಿ. ಮತ್ತೆ ತಾವು ನಿಮ್ನ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ಕೊಡಬೇಕು ಎಂದು ಯೋಚನೆ ಮಾಡಿದ್ದೇವೆಂದೂ ಸಹ ಹೇಳಿದ್ದೀರಿ. ಪಬ್ಲಿಕ್ ಪ್ರಾಸಿಕ್ಯೂಟರ್ಸ್ ತಮ್ಮಲ್ಲಿ ಎಷ್ಟು ಜನ ಇದ್ದಾರೆ ? ತಮ್ಮ ವರದಿಯಲ್ಲಿ ೧೯೮೧ನೇ ಇಸವಿಯಲ್ಲಿ ೨೦ ಜನ ಪಬ್ಲಿಕ್ ಪ್ರಾಸಿಕ್ಯೂಟರ್ಸ್, ೧೨ ಜನ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ೧೯ ಜನ ಗವರ್ನ್‌ಮೆಂಟ್ ಪ್ಲೀಡರ್ಸ್ ಮತ್ತು ೩೯ ಜನ ಅಡಿಷನಲ್ ಗವರ್ನ್‌ಮೆಂಟ್ ಪ್ಲೀಡರ್ಸ್‌ನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಜನ ಹಿಂದುಳಿದ ವರ್ಗದವರನ್ನು ತಾವು ನೇಮಕ ಮಾಡಿದ್ದೀರಿ ? ಇದನ್ನು ತಾವು ದಯಮಾಡಿ ಹೇಳಬೇಕು. ಆಮೇಲೆ ಅಫಿಷಿಯಲ್ ರಿಸೀವರ್ಸ್, ಇದೂ ಸಹ ಪ್ರಾಮುಖ್ಯವಾಗಿರತಕ್ಕ ಸ್ಥಾನ. ಈಗ ಇವರುಗಳು ೧೭ ಜನ ಇದ್ದಾರೆ, ಇವರಲ್ಲಿ ಎಷ್ಟು ಜನ ಹಿಂದುಳಿದವರನ್ನು ನೇಮಕ ಮಾಡಿದ್ದೀರಿ ? ತಾವು ಒಂದು ಒಳ್ಳೆಯ ಕೆಲಸ ಮಾಡಿದ್ದೀರಿ ಅದೇನೆಂದರೆ, ಲಾ ಗ್ರ್ಯಾಜ್ಯುಯೇಟ್ಸ್‌ಗೆ ಟ್ರೈನಿಂಗ್ ಕೊಡತಕ್ಕ ಕಾರ್ಯ. ಇದನ್ನು ಇನ್ನೂ ಜಾಸ್ತಿ ಜನಕ್ಕೆ ಮಾಡಿದರೆ ಅನುಕೂಲವಾಗುತ್ತದೆ ಎಂದು ನನಗನ್ನಿಸುತ್ತದೆ. ರೆಕ್ರೂಟ್‌ಮೆಂಟ್ ಮಾಡುವಾಗ ಒಳ್ಳೆಯವರು ಬಂದೇ ಬರುತ್ತಾರೆ. ಆದರೆ ಹಳ್ಳಿಯಲ್ಲಿ ಒಡೆಯನ ಮಗ ಲಾ ಪಾಸ್ ಮಾಡಿದ್ದರೆ ಅವನು ಕೂಲಿಯವನ ಮಗ ಆಗಿದ್ದರೆ ಅವನು ಬೇರೆಯವರ ಹಾಗೆ ಎಂದು, ತಾವು ನಿರ್ಣಯ ಮಾಡಲಿಕ್ಕಾಗುವುದಿಲ್ಲ. ಅವನಿಗೆ ಕಡಿಮೆ ಅಂಕಗಳು ಬಂದಿರಬಹುದು, ಅಥವಾ ಕೆಲವು ವಿಷಯಗಳಲ್ಲಿ ಫೇಲ್ ಆಗಿರಬಹುದು, ಅಂಥವನಿಗೂ ಸರಿಯಾದ ಪ್ರಾತಿನಿಧ್ಯ ಕೊಟ್ಟು ಇನ್ ಸರ್ವೀಸ್‌ನಲ್ಲಿ ಟ್ರೈನಿಂಗ್ ಕೊಡುವ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಕೇಂದ್ರ ಸರ್ಕಾರದವರೂ ಇದರ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಇನ್ ಸರ್ವೀಸ್ ಟ್ರೈನಿಂಗ್ ಕೊಡಿ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆದ್ದರಿಂದ ಈ ನ್ಯೂನತೆ ಏನು ಇದೆ ಅದನ್ನು ಸರಿಪಡಿಸಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಹೈಕೋರ್ಟ್‌ನವರು ನೀವು ಮಾಡತಕ್ಕ ಕಾನೂನು ಸರಿಯಾಗಿಲ್ಲ ಎಂದು ಕೆಲವು ಸಾರಿ ಪರವಾಗಿ ತೀರ್ಪು ಕೊಡಬಹುದು, ಇಲ್ಲದೇ ಹೋದರೆ ವಜಾ ಕೂಡ ಮಾಡಬಹುದು. ಇದುವರೆಗೂ ಸಹ ಹೈಕೋರ್ಟಿನಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ, ಈಗ ತಾನೆ ಮಾಡಿದ್ದಾರೆಂದು ಹೇಳಿದ್ದಾರೆ, ಬಹಳ ಸಂತೋಷ. ನಾನು ತಮಗೆ ಹೇಳುತ್ತೇನೆ, ಹಿಂದೆ ಎಷ್ಟು ವೇಕೆನ್ಸಿಗಳಿಗೆ ಹಿಂದುಳಿದವರನ್ನು ನೇಮಕ ಮಾಡಬಹುದಾಗಿತ್ತೋ ಅಷ್ಟನ್ನು ನಾನು ಕೇಳುವುದಿಲ್ಲ, ಐದು ವರ್ಷದ ಹಿಂದೆ ಎಷ್ಟು ಜನರಿಗೆ ಕೊಡಬೇಕಾಗಿತ್ತೋ ಅಷ್ಟು ಬ್ಯಾಕ್‌ಲಾಗ್ ಕೊಡಲಿಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ದಯಮಾಡಿ ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಅನಿಮಲ್ ಹಸ್ಬೆಂಡರಿಯ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ೧೯೭೦ರನೇ ಇಸವಿಯಲ್ಲಿ 'ವೂಲ್ ಬೋರ್ಡ್' ಎಂದು ಒಂದು ಬೋರ್ಡನ್ನು ಮಾಡಿದ್ದೆವು. ಅಂದಿನಿಂದ ಇಂದಿನವರೆಗೂ ಅದು ವೂಲ್ ಬೋರ್ಡ್ ಆಗಿದೆ. ಇದಕ್ಕೆ ಸರ್ಕಾರದವರು ವರ್ಷೇ ವರ್ಷೇ ಹಣವನ್ನು ಕೊಡುತ್ತಿದ್ದಾರೆ, ಅವರು ಕುರಿಗಳನ್ನು ಹೇಗೆ ಸಾಕಬೇಕು ಕಂಬಳಿಗಳನ್ನು ಹೇಗೆ ನೇಯಬೇಕು, ಇದರ ಬಗ್ಗೆ ಯೋಚನೆ ಮಾಡಿಲ್ಲ ಎಂದಲ್ಲ. ಅವರು ಮಾಡಿದ್ದಾರೆ. ಅವರು ಈ ಬಗ್ಗೆ ಒಂದು ಯೋಜನೆಯನ್ನು ಸರ್ಕಾರಕ್ಕೆ ಕಳುಹಿಸಿದರೆ ಅದನ್ನು ತಾವು ಅಪ್ರೂವ್ ಮಾಡಿಲ್ಲ. ಇದುವರೆಗೂ ತಾವು ಏನಾದರೂ ಈ ದಿಸೆಯಲ್ಲಿ ಮಾಡಿದ್ದೀರಾ ? ಅವರೇನು ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಅವಕ್ಕೆ ತಾವು ಸ್ಯಾಂಕ್ಷನ್ ಮಾಡಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ನಾನು ಉತ್ತರ ಕೊಡುವಾಗ ಅದರ ಬಗ್ಗೆ ಹೇಳುತ್ತೇನೆ,

ಶ್ರೀ ಬಿ. ಬಸವಲಿಂಗಪ್ಪ.—ವ್ಯವಸ್ಥಿತವಾದ ರೂಪದಲ್ಲಿ ಕುರಿಗಳನ್ನು ಹೇಗೆ ಸಾಕಬೇಕು, ಕುರಿಗಳ ತಳಿಗಳನ್ನು ಸಾಕತಕ್ಕ ಯೋಜನೆ, ಉಣ್ಣೆಯನ್ನು ಸರಿಯಾಗಿ ನೇಯ್ಗೆ, ಮಾಡತಕ್ಕದ್ದರ ಬಗ್ಗೆ ಯೋಜನೆಗಳು ಇವೆ, ಇವುಗಳನ್ನು ತಾವು ನೋಡಿ ಇವರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—(ಶಾಂತಿನಗರ) ಮಾನ್ಯ ಅಧ್ಯಕ್ಷರೇ , ಈಗತಾನೆ ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರು ಹೈ ಕೋರ್ಟ್ ಜಡ್ಜುಗಳನ್ನು ವರ್ಗಾಯಿಸುವುದರ ಬಗ್ಗೆ, ಬೇರೆ ರಾಜ್ಯದ ಜಡ್ಜುಗಳನ್ನು ಕರೆಯಿಸುವುದರ ಬಗ್ಗೆ ಹೇಳಿದರು. ಇದು ಸರಿಯೇ, ಇಲ್ಲವೇ ಎಂದು ಹೇಳುವುದು ಬಹಳ ಕಷ್ಟ. ಇದರ ಬಗ್ಗೆ ಬಹಳ ದೊಡ್ಡ ಚರ್ಚೆಯೇ ನಡೆಯುತ್ತಿದೆ. ಮಾನ್ಯ ಬಸವ ಲಿಂಗಪ್ಪನವರು ಹೇಳಿದ ಹಾಗೆ ನಮ್ಮಲ್ಲಿರತಕ್ಕ ಜಡ್ಜುಗಳು ಬೇರೆ ರಾಜ್ಯಗಳಲ್ಲಿ ಹೋಗಿ ತಮ್ಮ ಸಾಮರ್ಥ್ಯವನ್ನು ತೋರಿಸುವುದಾದರೆ ಆಗಲೀ, ತೋರಿಸುವುದಕ್ಕೆ ಇವರಿಗೆ ಯೋಗ್ಯತೆ ಕಡಿಮೆ ಇದೆ ಎನ್ನುವುದಾದರೆ ಅವರೂ ಸಹ ಇದೇ ವಾದವನ್ನು ಹೇಳಬಹುದು. ಏಕೆಂದರೆ, ಬೇರೆ ಎಲ್ಲಾ ರಾಜ್ಯಗಳವರು ಇದನ್ನು ವಿರೋಧ ಮಾಡದೆ ನಮ್ಮ ರಾಜ್ಯದವರು ಮಾಡಿದ್ದರೆ ಅವರು ಹೇಳುವುದನ್ನು ಒಪ್ಪಬಹುದಾಗಿತ್ತು. ಆದರೆ ನಮ್ಮ ರಾಜ್ಯದವರೊಬ್ಬರೆ ಇದನ್ನು ವಿರೋಧ ಮಾಡುತ್ತಿಲ್ಲವೆಂದ ಮೇಲೆ, ಬೇರೆಯವರು ವಿರೋಧ ಮಾಡುತ್ತಿದ್ದರೆ, ಅವರ ಯೋಗ್ಯತೆ ಕಡಿಮೆ ಎಂದು ಹೇಳಬಹುದಲ್ಲವೇ ? ಯೋಗ್ಯತೆ ಕಡಿಮೇ ಇದ್ದವರು ಇಲ್ಲಿ ಬಂದು ಹೇಗೆ ಕೆಲಸ ಮಾಡುತ್ತಾರೆ ? ಆದ್ದರಿಂದ ಮಾನ್ಯ ಸದಸ್ಯರು ಹೇಳುವಂಥಾದ್ದು ಅಷ್ಟು ಸರಿಯಲ್ಲ ನಾವು ರಾಜಕೀಯವಾಗಿ ಇದನ್ನು ನೋಡಬಾರದು ಜಡ್ಜುಗಳ ಟ್ರಾನ್ಸ್‌ಫರ್ ಮಾಡಿದರೆ ಸರ್ಕಾರದ ಪರವಾಗಿ ತೀರ್ಪು ಕೊಡುತ್ತಾರೆ, ಇಲ್ಲದೇ ಹೋದರೆ ಇಲ್ಲ ಎನ್ನುವ ಅಭಿಪ್ರಾಯ ಸರಿಯಲ್ಲ. ಸರ್ಕಾರದ ಪರವಾಗಿ ತೀರ್ಪು ಕೊಡಬೇಕೆಂದೇನೂ ಇಲ್ಲ ಆದರೆ ದುರುದ್ದೇಶದಿಂದ ವಿರೋಧವಾಗಿ ಕೊಟ್ಟರೆ ಇರತಕ್ಕವರನ್ನು ವರ್ಗಾಯಿಸಬಹುದು.

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಮೈಕೇಲ್ ಫರ್ನಾಂಡೀಸ್ ಅವರು ನಾನು ಏನು ಹೇಳಿದ್ದೇನೆನ್ನುವುದನ್ನು ಚೆನ್ನಾಗಿ ತಿಳಿದುಕೊಂಡು ಮಾತನಾಡಲಿ, ಇದಕ್ಕೆ ಅವರು ರಾಜಕೀಯ ಕಾರಣ ಕೊಡಬಾರದು. ಅರೆಸ್ಟ್ ಆದವರನ್ನು ಹೈಕೋರ್ಟ್ ಜಡ್ಜನ್ನಾಗಿ ಮಾಡಲಿಲ್ಲವೇ, ನಾನು ಇದನ್ನು ಹೇಳಬೇಕು ಎಂದಿದ್ದರೆ ಹೇಳಬಹುದಾಗಿತ್ತು. ಆದರೆ ನಾನು ಈ ವಿಷಯವನ್ನು ಹೇಳಲಿಲ್ಲ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಇದರ ಬಗ್ಗೆ ನಾನೊಂದು ಸಲಹೆಯನ್ನು ಮಾಡುತ್ತೇನೆ ಆಲ್ ಇಂಡಿಯಾ ಪೆನಾಲ್ ಮಾಡಿ ಯಾರನ್ನು ಹೈಕೋರ್ಟ್ ಜಡ್ಜುಗಳನ್ನಾಗಿ ತೆಗೆದುಕೊಳ್ಳಬೇಕು ಅವರನ್ನು ಕಳುಹಿಸಿ ಎಂದು ಹೇಳಬೇಕು. ಆದರೆ ಈಗಿರತಕ್ಕ ಜಡ್ಜುಗಳನ್ನು ವಿಮ್ಸಿಕಲ್ ಆಗಿ ವರ್ಗಾಯಿಸುವ ಅವಶ್ಯಕತೆ ಇಲ್ಲ, ಆಲ್ ಇಂಡಿಯಾ ಪೆನಾಲ್ಲ್ ಮಾಡಿ, ಜಡ್ಜುಗಳು ಎಲ್ಲಿ ಕೆಲಸ ಮಾಡಲಿಕ್ಕೆ ಇಷ್ಟಪಡುತ್ತಾರೊ ಅಲ್ಲಿ, ಯಾವ ರಾಜ್ಯ ಬೇಕೊ ಆ ರಾಜ್ಯಕ್ಕೆ ಅವರ ರಾಜ್ಯ ಬಿಟ್ಟು ಬೇರೆ ಕಡೆಗೆ ಹೋಗುವವರನ್ನು ಕಳುಹಿಸಬಹುದು. ಇನ್ನೊಂದು ರಾಜ್ಯಕ್ಕೆ ಅವರು ಹೋಗುವುದಕ್ಕೆ ತಯಾರಿದ್ದರೆ ಅವರನ್ನೂ ಕಳುಹಿಸಬಹುದು,

೫-೦೦ ಪಿ. ಎಂ.

ಇಷ್ಟು ನ್ಯಾಯಾದೀಶರ ಬಗ್ಗೆ ಹೇಳಿದ್ದು ಆಯಿತು. ಇನ್ನು ನಮ್ಮ ಮಾನ್ಯ ಮಂತ್ರಿಗಳಾದಂತಹ ಶ್ರೀಮಾನ್ ರಾಮಕೃಷ್ಣರವರು ಒಂದು ಒಳ್ಳೆಯ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದಕ್ಕೆ ನಾವೆಲ್ಲ ಸಂತೋಷ ಪಡಬೇಕಾಗಿದೆ. ಅದು ಏನೆಂದರೆ ಪಶು ವೈದ್ಯ ಶಾಲಾ ಡಾಕ್ಟರ್‌ಗಳಿಗೆ ಇತರೇ ಡಾಕ್ಟರ್‌ಗಳಿಗೆ ಇರುವಂತೆ ಸಮಾನ ವೇತನವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಅದು ಏನೆಂದರೆ, ಪಶು ವೈದ್ಯ ಶಾಲಾ ಡಾಕ್ಟರ್‌ಗಳು ಒಂದು ವಿಷಯದಲ್ಲಿ ಪಾಸು ಮಾಡಬೇಕಾದರೆ ಕನಿಷ್ಟ ಪಕ್ಷ ೬೦ ಅಂಕಗಳನ್ನು ಪಡೆದುಕೊಳ್ಳಬೇಕು, ಈ ೬೦ ಅಂಕಗಳನ್ನು ಪಡೆದುಕೊಂಡರೆ ಮಾತ್ರ ಅವರಿಗೆ ಮುಂದಿನ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅವಕಾಶ ಇದೆ, ಇಲ್ಲದಿದ್ದರೆ ಇಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ ಆ ಪಶುವೈದ್ಯ ಶಾಲಾ ಡಾಕ್ಟರ್‌ಗಳು ಕೇಳುತ್ತಿರುವುದು ಏನೆಂದರೆ, ಇತರೇ ಡಾಕ್ಟರ್‌ಗಳಿಗೆ ಇರುವಂತೆ ನಮಗೂ ಸಮಾನ ವೇತನವನ್ನು ಕೊಡಬೇಕೆಂದು ಅವರ ರಕ್ಷಣೆಯನ್ನು ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಈ ಪಶುವೈದ್ಯ ಶಾಲಾ ಡಾಕ್ಟರ್‌ಗಳ ಬೇಡಿಕೆಗಳು ಇನ್ನೂ ಇವೆ. ಅವು ಯಾವುವೆಂದರೆ ಇವರ ಇಲಾಖೆಯಲ್ಲಿ ಬೇಕಾದಂತಹ ಎಸ್ಸೆನ್ಷಿಯಲ್ ಸರ್ವೀಸಸ್ ಬಗ್ಗೆ, ಮತ್ತು ಉಚಿತ ಮನೆಗಳನ್ನು ಒದಗಿಸಿ ಕೊಡುವುದರ ಬಗ್ಗೆ. ಮತ್ತು ಸ್ಪೆಷಲ್ ಸಿಕ್‌ಲೀವ್ ಕೊಡುವ ಬಗ್ಗೆ, ಮತ್ತು ನಾನ್ ಪ್ರಾಕ್ಟೀಸ್ ಅಲೋಯೆನ್ಸ್ ಕೊಡುವುದರ ಬಗ್ಗೆ ಇನ್ನು ಇತರೆ ಬೇಡಿಕೆಗಳನ್ನು ಇಟ್ಟಿದ್ದಾರೆ. ಈ ಎಲ್ಲಾ ಬೇಡಿಕೆಗಳನ್ನು ನಮ್ಮ ಮಾನ್ಯ ಮಂತ್ರಿಗಳು ಒದಗಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಮಾನ್ಯಮಂತ್ರಿಗಳು ಈ ಕೆಲಸವನ್ನು ಬಹಳ ತಡವಾಗಿ ಮಾಡಿದ್ದಾರೆ ಎನ್ನುವ ಆರೋಪವನ್ನು ನಾನು ಅವರ ಮೇಲೆ ಮಾಡುತ್ತಿದ್ದೇನೆ. ಹಿಂದೆ ಮಾನ್ಯ ಮಂತ್ರಿಗಳನ್ನು ಒಂದೆರಡು ಬಾರಿ ಕೇಳಿಕೊಂಡಿದ್ದರು. ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಮಾತುಗಳನ್ನು ಹೇಳಬೇಕಾದರೆ ನನ್ನ ಕ್ಷೇತ್ರದಲ್ಲಿ ಸುಮಾರು ಒಂದು ಅಥವಾ ಎರಡು ಹಸುಗಳನ್ನು ಇಟ್ಟುಕೊಂಡು ಇರುವವರು ಇರುತ್ತಾರೆ. ಅವರ ಹಸುಗಳಿಗೆ ಏನಾದರೂ ಕಾಯಿಲೆ ಬಂದರೆ ಸರಿಯಾದಂತಹ ಪಶುವೈದ್ಯಶಾಲೆ ಇಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೆ, ಅದು ಏನೆಂದರೆ, ಬೆಂಗಳೂರು ನಗರ ಸಭೆಯವರು ಕಟ್ಟಡವನ್ನು ಕಟ್ಟಿಸಿಕೊಡುತ್ತಾರೆ, ಸರ್ಕಾರದವರು ಈ ಪಶುವೈದ್ಯಶಾಲೆಯನ್ನು ನಡೆಸಿಕೊಂಡು ಬರಬೇಕೆಂದು, ಆದರೆ ನಾನು ಈ ವಿಷಯವನ್ನು ತಮ್ಮ ಇಲಾಖೆಯ ಅಧಿಕಾರಿಗಳಿಗೂ ಸಹ ತಿಳಿಸಿದ್ದೇನೆ. ಮತ್ತು ಮಾನ್ಯ ಮಂತ್ರಿಗಳಿಗೂ ಸಹ ತಿಳಿಸಿದ್ದೇನೆ. ಈ ಕಟ್ಟಡದ ಶಂಕುಸ್ಥಾಪನೆಯನ್ನು ನಾನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆಯ ಮಂತ್ರಿಗಳ ಕೈಯಲ್ಲಿ ಮಾಡಿಸಬೇಕೆಂಬ ಆಸೆ ಸಹ ನನಗೆ ಇತ್ತು. ಮತ್ತು ಎಷ್ಟೋ ಜನ ಹಸುಗಳನ್ನು ಇಟ್ಟುಕೊಂಡಿರುವವರು ಮಾನ್ಯ ಮಂತ್ರಿಗಳಿಗೆ ಶಾಪವನ್ನು ಹಾಕುತ್ತಿದ್ದಾರೆ ಇದನ್ನು ಮಾನ್ಯ ಮಂತ್ರಿಗಳು ಗಮನಿಸಿ ಆದಷ್ಟು ಬೇಗ ಈ ಒಂದು ಪಶುವೈದ್ಯಶಾಲೆಯನ್ನು ಕಟ್ಟಿಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಹಸುಗಳಿಗೆ ಕೊಡುವಂತಹ ಔಷಧಿಯಲ್ಲಿ ಏನೋ ಹೆಚ್ಚು ಕಡಿಮೆ ಇದೆಯೆಂದು ನಾನು ಕೇಳಿದ್ದೇನೆ, ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ತನಿಖೆಯನ್ನು ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಹಾಲಿನ ದರ ಶೇಕಡ ೧೫೦-೨೦೦ ರಷ್ಟು ಹೆಚ್ಚು ಮಾಡಿದ್ದಾರೆ. ಇದಕ್ಕೆ ಕಾರಣ ವೇನೆಂದರೆ, ಬೂಸ ಬೆಲೆ ಜಾಸ್ತಿಯಾಗಿದೆ. ಖಾಸಗಿಯವರು ಬೂಸವನ್ನು ಕೊಂಡು ಕೊಂಡು ಹಸಗಳನ್ನು ಮಾರಾಟ ಮಾಡಬೇಕಾದರೆ ಕಷ್ಟವಾಗುತ್ತದೆ. ಇದರಿಂದ ನಾನು ಹೇಳುವುದೇನೆಂದರೆ, ಜನರಿಗೆ ಅಕ್ಕಿ ಮತ್ತು ರಾಗಿ ಇತರೆ ಸಾಮಗ್ರಿಗಳನ್ನು ಯಾವ ರೀತಿ ನ್ಯಾಯ ಬೆಲೆ ಅಂಗಡಿಯಲ್ಲಿ ಮಾರಾಟ ಮಾಡುತ್ತೀರೋ ಅದೇ ರೀತಿಯಲ್ಲಿ ಈ ಬೂಸವನ್ನು ಸಹ ನ್ಯಾಯ ಬೆಲೆ ಅಂಗಡಿಗಳ ಮೂಲಕ ಮಾರಾಟ ಮಾಡಿದರೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಿಂದ ಏನಾಗುತ್ತದೆ ಎಂದರೆ ಹಾಲು ಉತ್ಪಾದನೆ ಜಾಸ್ತಿಯಾಗುತ್ತದೆ,

ಇನ್ನು ತಮ್ಮ ಕೆ. ಎಂ. ಡಿ. ಸಿ ಕಚೇರಿಯನ್ನು ಮಹಾತ್ಮಗಾಂಧಿ ರಸ್ತೆಯಲ್ಲಿ ಮಾಡಿಕೊಂಡಿದ್ದೀರಿ. ಈ ಒಂದು ಕಛೇರಿಗೆ ಸುಮಾರು ೪೦ ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಡುತ್ತಿದ್ದೀರಿ. ಮತ್ತೆ ಪೂರ್ಣಿಮಾ ಬಿಲ್ಡಿಂಗ್‌ನಲ್ಲಿ ಒಂದು ಕಛೇರಿಯನ್ನು ಮಾಡಿಕೊಂಡಿದ್ದೀರಿ. ಈ ಒಂದು ಕಟ್ಟಡಕ್ಕೆ ಸುಮಾರು ೧೮ ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಡುತ್ತಿದ್ದೀರಿ, ಒಟ್ಟು ತಿಂಗಳೊಂದಕ್ಕೆ

ತಾವು ಕೊಡುವ ಬಾಡಿಗೆ ಸುಮಾರು ೬೦ ಸಾವಿರ ರೂಪಾಯಿಗಳಾಗುತ್ತದೆ ಅಂದರೆ ಒಂದು ವರ್ಷಕ್ಕೆ ೭ ಲಕ್ಷ ರೂಪಾಯಿಗಳಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಈಗ ತಾವು ಡೈರಿಯನ್ನು ಎಲ್ಲಿ ತೆಗೆದಿದ್ದೀರೋ ಅಲ್ಲಿಯೇ ಒಂದು ಸುಂದರವಾದ ಕಟ್ಟಡವನ್ನು ಕಟ್ಟಿಕೊಂಡರೆ ಅನುಕೂಲವಾಗುತ್ತದೆ ಮತ್ತು ತಾವು ಈಗ ಕೊಡುತ್ತಿರುವ ಬಾಡಿಗೆ ಸಹ ಉಳಿಯುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವು ತಮ್ಮ ಡೈರಿಯಿಂದ ಸರಬರಾಜು ಮಾಡುವಂತಹ ಹಾಲು ಏನು ಇದೆ ಅದಕ್ಕೆ ತಾವು ವೈಟ್ ಪೌಡರನ್ನು ಮಿಕ್ಸ್ ಮಾಡಿ ಮಾರಾಟ ಮಾಡುತ್ತಿದ್ದೀರಿ. ಅದಕ್ಕೆ ನಮ್ಮ ಮಾನ್ಯ ಸದಸ್ಯರಾದಂತಹ ಬೊಮ್ಮಾಯಿಯವರು ಮಾತನಾಡುತ್ತಾ ಹೇಳಿದರು, ಒಂದು ಲೀಟರ್ ಹಾಲಿಗೆ ಅರ್ಧ ನೀರು ಅರ್ಧ ಪೌಡರ್ ಮಿಕ್ಸ್ ಮಾಡಿ ಮಾರಾಟ ಮಾಡುತ್ತಾರೆ ಎಂದು.

ಆದರೆ ಈ ಪೌಡರ್‌ನ್ನು ನಾವು ವಿದೇಶಗಳಿಂದ ತರಿಸಿಕೊಂಡು ಉತ್ತಮವಾದ ಹಾಲು ಮಾರಾಟ ಮಾಡುತ್ತೇವೆ ಎಂದು ತಾವು ಹೇಳುತ್ತೀರಿ ಆದ್ದರಿಂದ ನಾನು ಹೇಳುವುದೇನೆಂದರೆ, ಹೆಚ್ಚು ಹಾಲು ಉತ್ಪಾದನೆ ಮಾಡಿ ಕಡಿಮೆ ದರದಲ್ಲಿ ಗ್ರಾಹಕರಿಗೆ ಹಾಲು ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಮತ್ತು ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಹಸುಗಳನ್ನು ಸಾಕಾಣಿಕೆ ಮಾಡುತ್ತಾರೆ ಅಂತಹ ಕಡೆಗಳಲ್ಲಿ ಹೆಚ್ಚು ಹೆಚ್ಚು ಪಶುವೈದ್ಯ ಶಾಲೆಗಳನ್ನು ತೆರೆದು ಹಸುಗಳ ರಕ್ಷಣೆ ಮಾಡಬೇಕು ಎಂದು ನಾನು ಹೇಳುತ್ತೇನೆ ಇನ್ನು ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇನೆಂದರೆ ಸಾಮಾನ್ಯವಾಗಿ ಹಸುಗಳನ್ನು ಇಟ್ಟುಕೊಂಡಿರುವವರು ಬ್ಯಾಂಕ್‌ಗಳ ಮುಖಾಂತರವಾಗಿ ಸಾಲವನ್ನು ಪಡೆದುಕೊಂಡಿರುತ್ತಾರೆ. ಆದ್ದರಿಂದ ಇಂತಹ ಹಸುಗಳಿಗೆ ಸರ್ಕಾರದವರು ಇನ್‌ಷ್ಯೂರೆನ್ಸ್ ಮಾಡಿಸಿಕೊಂಡರೆ ಅವರಿಗೆ ಅನುಕೂಲವಾಗುತ್ತದೆ. ಈ ಒಂದು ಇನ್‌ಷ್ಯೂರೆನ್ಸ್ ಸ್ಕೀಮ್‌ನ್ನು ಪ್ರತಿಯೊಬ್ಬರಿಂದ ತೆಗೆದುಕೊಳ್ಳುವುದು ಅವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಯೋಜನೆಯನ್ನು ಜಾರಿಗೆ ತರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆಯ ಮಂತ್ರಿಗಳು ತಂದಿರತಕ್ಕಂತಹ ಬೇಡಿಕೆಯನ್ನು ನಾನು ಸಮರ್ಥಿಸುತ್ತಾ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕಳೆದ ೭–೮ ವರ್ಷಗಳಿಂದ ನಮ್ಮ ರಾಜ್ಯದ ೮ ಜಿಲ್ಲೆಗಳಲ್ಲಿ ಕರ್ನಾಟಕ ಡೈರಿ ಡೆವಲಪ್‌ಮೆಂಟ್‌ನವರು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಎನ್ನುವ ಮಾತನ್ನು ನಾನು ಮೊಟ್ಟಮೊದಲನೆಯದಾಗಿ ತಿಳಿಸಲು ಇಷ್ಟಪಡುತ್ತೇನೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಸಾವಿರಾರು ಬಡ ಕುಟುಂಬಗಳಿಗೆ ಈ ಒಂದು ಯೋಜನೆ ಒಂದು ರೀತಿಯಲ್ಲಿ ವರಪ್ರಸಾದವಾಗಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದ ೮ ಜಿಲ್ಲೆಗಳಲ್ಲಿ ಸುಮಾರು ೧೪೫೦ ಸಹಕಾರಿ ಸಂಘಗಳನ್ನು ತೆರೆದು ಅಲ್ಲಿ ಉತ್ತಮವಾದಂತಹ ಕೆಲಸಕಾರ್ಯಗಳನ್ನು ಮಾಡಿ ಸುಮಾರು ೧೫–೨೦ ಕೋಟಿ ರೂಪಾಯಿಗಳ ವ್ಯವಹಾರವನ್ನು ನಡೆಸುತ್ತಿದ್ದಾರೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹೈನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ಮಾಡಿ ಅದರಲ್ಲಿ ಒಬ್ಬ ರೈತನನ್ನೂ ಸಹ ಸದಸ್ಯರನ್ನಾಗಿ ಮಾಡಿದ್ದಾರೆ. ಇದರಿಂದ ರೈತರಿಗೆ ನೇರವಾಗಿ ಹಣ ದೊರೆಯುತ್ತದೆ. ಈ ಒಂದು ವ್ಯವಸ್ಥೆ ಬಹಳ ಆತ್ಯುತ್ತಮವಾಗಿ ನಡೆಯುತ್ತಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇವತ್ತು ನಮ್ಮ ದೇಶದಲ್ಲಿ ಇರತಕ್ಕಂಥ ತೊಂದರೆ ಏನು ಎಂದರೆ ರೈತ ಏನು ಬೆಳೆಯುತ್ತಾನೆ ಅದಕ್ಕೆ ಲಾಭದಾಯಕವಾದ ಬೆಲೆ ಸಿಗುವುದಿಲ್ಲ. ಒಳ್ಳೆಯ ಬೆಲೆ ಸಿಕ್ಕಿ ಮಾರಾಟ ಮಾಡುವುದರೊಳಗಾಗಿ ರೈತ ಅನೇಕ ವಿಧವಾದ ಕಷ್ಟಗಳಿಗೆ ಸಿಕ್ಕಿ ಮೂರನೇ ಮಧ್ಯವರ್ತಿಗಳ ಕೈಗೆ ಸಿಕ್ಕಿ ಹಾಕಿಕೊಂಡು ತೊಂದರೆಗಳನ್ನು ಅನುಭವಿಸಿದ ನಿದರ್ಶನಗಳು ನೂರಾರಿವೆ. ಆದರೆ ಹೈನುಗಾರಿಕೆ ವಿಷಯದಲ್ಲಿ ಈ ಭೀತಿ ಇಲ್ಲ. ರೈತ ಉತ್ಪಾದನೆ ಮಾಡಿದಂಥ ಹಾಲನ್ನು ಸೊಸೈಟಿಗಳು ಸಂಗ್ರಹ ಮಾಡುತ್ತವೆ ಮತ್ತು ವಾರಕ್ಕೆ ಒಂದು ದಿವಸ ಅವನ ಮನೆ ಬಾಗಿಲಿಗೇ ಹೋಗಿ ಹಣ ಪಾವತಿ ಮಾಡುವ ಏರ್ಪಾಡಿದೆ. ಪಶು ಆರೋಗ್ಯದ ಬಗ್ಗೆ ಕೂಡ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಕೆ ಡಿ ಸಿ.ಸಿ. ಯವರು ಮಾಡಿದ್ದಾರೆ ಮತ್ತು ಪಶು ಆಹಾರ ವಿತರಣೆ ವ್ಯವಸ್ಥೆಯನ್ನು ಸಹ ಮಾಡಿದ್ದಾರೆ. ಅದರಂತೆಯೇ ಉತ್ತಮ ಮಿಶ್ರ ತಳಿಯ ದನಕರುಗಳನ್ನು ಉತ್ಪತ್ತಿ ಮಾಡುವುದಕ್ಕೆ ಕೂಡ ಸೂಕ್ತವಾದ

ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಬಹಳ ನಿಷ್ಠೆಯಿಂದ ಕೆಲಸ ಮಾಡಿ ಕೆಡಿಸಿಸಿ ಅಧಿಕಾರಿಗಳು ಲಕ್ಷಾವಧಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಆದರೆ ಈ ಒಂದು ಭಾಗ್ಯ ರಾಜ್ಯದ ಎಂಟು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದು ಉಳಿದ ಹನ್ನೊಂದು ಜಿಲ್ಲೆಗಳಿಗೆ ಕೂಡ ಈ ಆಪರೇಷನ್ ಫ್ಲಡ್ ೧೧ ಕ್ಷೀರಧಾರೆ ೨ನೇ ಹಂತದ ಕೆಲಸಕ್ಕೆ ಅನೇಕ ಭಾಗಗಳಿಂದ ಇವತ್ತಿನ ದಿವಸ ಒತ್ತಡ ಬಂದರೂ ಕೂಡ ಇದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ನಾನು ಇಂಟರೀಮ್ ಬ್ಯುರೋಕ್ರಸಿ ಎಂದು ಹೇಳುತ್ತೇನೆ. ಈ ಒಂದು ಏರ್ಪಾಡು ಆಗಿ ರೈತರಿಗೆ ಪ್ರಯೋಜನ ದೊರೆಯತಕ್ಕಂಥ ಯೋಜನೆ ಕೈತಪ್ಪಿ ಹೋಗುವ ಸಂಭವ ಕೂಡ ಇತ್ತು. ೨-೩ ವರ್ಷಗಳ ಹಿಂದೆಯೇ ಈ ಯೋಜನೆಯನ್ನು ಕರ್ನಾಟಕದಲ್ಲಿ ಕೈಗೊಂಡಿದ್ದರೆ ೬೦-೭೦ ಕೋಟಿ ರೂಪಾಯಿಗಳಷ್ಟು ಹಣ ಈ ದೇಶಕ್ಕೆ ಬರುತ್ತಿತ್ತು. ಅದರಲ್ಲಿ ಸುಮಾರು ೧೫-೨೦ ಕೋಟಿ ರೂಪಾಯಿಗಳ ಹಣ ರೈತರಿಗೆ ಸಬ್ಸಿಡಿಯಾಗಿ ಕೂಡ ದೊರೆಯುವುದರಲ್ಲಿತ್ತು. ಇದನ್ನು ಏನಾದರೂ ಜಾರಿಗೆ ತಂದರೆ ಫೆಡರೇಶನ್ ಆಗುತ್ತದೆ. ಕೆ.ಡಿ ಸಿ.ಸಿ. ಯು ಅಸ್ಥಿತ್ವ ಹೊರಟುಹೋಗುತ್ತದೆ, ಲಾಭ ಸಂಪಾದಿಸುವ ಅವಕಾಶಗಳು ತಮ್ಮ ಕೈತಪ್ಪಿ ಹೋಗುತ್ತದೆಂದು ಅಲ್ಲಿನ ಕೆಲವು ಅಧಿಕಾರಿಗಳು ರೈತರಿಗೆ ಅನ್ಯಾಯವಾದರೂ ಚಿಂತೆ ಇಲ್ಲ, ತಮ್ಮ ಕಿರೀಟ ಉಳಿಯಬೇಕೆಂದು ಮಾಡಿದ ಸಂಚಿನಿಂದ ಈ ಒಂದು ಯೋಜನೆ ನಮ್ಮ ರಾಜ್ಯದ ರೈತರಿಗೆ ಈ ಯೋಜನೆ ದಕ್ಕದೇ ಹೋಗುವ ಸಂಭವ ಇತ್ತು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೈ. ರಾಮಕೃಷ್ಣರವರು ದಿಟ್ಟ ನಿಲುವು ತೆಗೆದುಕೊಂಡು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾಯರ ಹತ್ತಿರ ಸಮಾಲೋಚನೆ ನಡೆಸಿ ಎನ್‌ಡಿಡಿಬಿ ಹತ್ತಿರ ಹೋರಾಟ ಮಾಡಿ, ನಮ್ಮ ರಾಜ್ಯದಲ್ಲಿ ಈ ಯೋಜನೆ ಕಾರ್ಯಗತವಾಗುವ ಕೆಲಸ ಮಾಡಿದ್ದಕ್ಕೆ ಮಾನ್ಯ ರಾಮಕೃಷ್ಣ ಅವರಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಗುಂಡೂರಾಯರಿಗೂ ನಾನು ಹೃತ್ಪೂರ್ವಕವಾಗಿ ಅಭಿನಂದಿಸುವುದಕ್ಕೆ ಇಚ್ಛೆಪಡುತ್ತೇನೆ.

ಈ ಒಂದು ಯೋಜನೆ ಅಸ್ಥಿತ್ವಕ್ಕೆ ಬಂದು ಎರಡು ವರ್ಷಗಳು ಕಳೆದು ಹೋಗಿವೆ. ಐದು ವರ್ಷಗಳ ಅವಧಿಯಲ್ಲಿ ಸುಮಾರು ೫೦ ಕೋಟಿ ರೂಪಾಯಿಗಳಷ್ಟು ಧನಸಹಾಯ ಎನ್‌ಡಿಡಿಬಿ ಯಿಂದ ಬರುತ್ತಿತ್ತು. ಇದರಲ್ಲಿ ಸುಮಾರು ೧೫ ಕೋಟಿ ರೂಪಾಯಿಗಳು ಈ ದೇಶದ ಅಭ್ಯುದಯಕ್ಕಾಗಿ ದುಡಿಯುವ ರೈತರಿಗೆ ಮುಫತ್ತಾಗಿ ದೊರೆಯುತ್ತಿತ್ತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡ ರೈತರ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಅಭಿವೃದ್ಧಿ ಆಗಬೇಕೆಂದು ದೃಷ್ಟಿಯಿಂದ ಈ ಯೋಜನೆಯನ್ನು ತರಲಾಗಿದೆ. ಈ ಯೋಜನೆ ಪರಿಪೂರ್ಣವಾಗಬೇಕಾದರೆ ಹೈನುಗಾರಿಕೆ ಅಭಿವೃದ್ಧಿಯಾಗಬೇಕು, ಗ್ರಾಮಾಂತರ ಪ್ರದೇಶದಲ್ಲಿ ಮಿಶ್ರ ತಳಿಗಳ ಸಂಖ್ಯೆ ಬೆಳೆಯಬೇಕು, ಹೆಚ್ಚಿನ ಪ್ರಮಾಣದಲ್ಲಿ ಹಾಲನ್ನು ಶೇಖರಣೆ ಮಾಡಿ ಪಟ್ಟಣಗಳಿಗೆ ಹಂಚುವ ವ್ಯವಸ್ಥೆ ಮಾಡಬೇಕು. ಇಲ್ಲಿ ನನ್ನ ಕೆಲವು ಮಾನ್ಯ ಸ್ನೇಹಿತರು ಶ್ರೀ ರಾಮ್‌ದೇವ್‌ರಂತಹವರು, ಪಟ್ಟಣಗಳಲ್ಲಿರುವವರು ಒಂದು ರೂಪಾಯಿಗೆ ನಾಲ್ಕು ಲೀಟರು ಹಾಲು ಕೊಟ್ಟರೆ ಬಹಳ ಸಂತೋಷಪಡುತ್ತಾರೆ, ಆದರೆ ಅವರ ಕಷ್ಟ ಸುಖವೇನೆಂಬುದು ಅವರಿಗೆ ಗೊತ್ತಿಲ್ಲ. ಹಾಲಿನ ರೇಟನ್ನು ಏನಾದರೂ ಜಾಸ್ತಿ ಮಾಡಬೇಕಾಗಿದ್ದರೆ ಇವರು ಎದ್ದು ನಿಂತುಬಿಡುತ್ತಾರೆ. ಗ್ರಾಮಾಂತರ ಜನರ ಕಷ್ಟಗಳೇನು, ದನಗಳನ್ನು ಸರಿಯಾಗಿ ಸಾಕಬೇಕು, ಹುಲ್ಲನ್ನು ಪೋಂಚಬೇಕು ಇವೆಲ್ಲವುಗಳನ್ನು ಹೊಂದಿಸಿಕೊಂಡು ಅವರು ಜೀವನವನ್ನು ಸಾಗಿಸುವುದೇ ಕಷ್ಟಕರವಾಗಿರುವಾಗ ಟೌನಿನಲ್ಲಿ ಇರತಕ್ಕಂಥ ಜನರಿಗೆ ಅವರ ಕಷ್ಟನಷ್ಟಗಳ ಬಗ್ಗೆ ಏನೂ ಗೊತ್ತಿರುವುದಿಲ್ಲ. ದಿನಕ್ಕೆ ಹತ್ತು ಸಲ ಕಾಫಿ ಕುಡಿಯುವುದಕ್ಕೆ ತಯಾರಾಗಿರುತ್ತಾರೆ ಆದರೆ ಈ ಹಾಲನ್ನು ಯಾರು ಉತ್ಪತ್ತಿ ಮಾಡಿಕೊಡುತ್ತಾರೆ ಅಂತಹ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಉತ್ತಮಗೊಂಡು ನಮ್ಮ ಹೆಂಡತಿ ಮಕ್ಕಳ ಹಾಗೆ ಅವರ ಹೆಂಡತಿ ಮಕ್ಕಳೂ ಕೂಡ ಒಳ್ಳೆಯ ಬಟ್ಟೆ ಹಾಕಿಕೊಂಡು ನೆಮ್ಮದಿಯ ಜೀವನ ನಡೆಸಲಿ ಎನ್ನುವುದಿಲ್ಲ. ಮೂರು ಸಾರಿ ಹಾಲಿನ ರೇಟನ್ನು ಜಾಸ್ತಿಮಾಡಿದಾಗಲೂ ಇವರು ಎದ್ದೆದ್ದು ನಿಂತುಬಿಟ್ಟರು. ಹಳ್ಳಿಗಳಿಗೆ ಹೋಗಿ, ನಿಮ್ಮನ್ನು ಸರಿಮಾಡಬಿಡುತ್ತಾರೆ. ಗ್ರಾಮಾಂತರ ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಾಗಬೇಕು, ಅವರೂ ಕೂಡ ನೆಮ್ಮದಿಯಿಂದ ಜೀವನ ಮಾಡುವಂತಾಗಿ ನಾಲ್ಕು ಕಾಸು ಸಂಪಾದಿಸಿ ಅನುಕೂಲಕರ ಸ್ಥಿತಿಗೆ ಬರಬೇಕೆಂದು ಈ ಯೋಜನೆಯನ್ನು ತಂದಿರುವಾಗ ಹಾಲಿನ ರೇಟನ್ನು ಜಾಸ್ತಿ ಮಾಡಲಿಕ್ಕೆ ಬಂದಾಗ ಇಲ್ಲಿ ನೆಗೆದು-ನೆಗೆದು ಕೊಡುತ್ತಾರೆ ಎರಡು ಮೂರು ಶಾಸಕರಿಗೆ ಅಂಜದೆ ಈ ಲಕ್ಷಾವಧಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಶೇಕಡಾ ೮೦ ರಷ್ಟು ಹಾಲನ್ನು ಉತ್ಪಾದನೆ

ಮಾಡುವ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ರೈತರ ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಬೇಕಾದರೆ, ತಾವು ದಯವಿಟ್ಟು ದಿಟ್ಟ ಸಿಲುವನ್ನು ತೆಗೆದುಕೊಂಡು ನ್ಯಾಯವಾಗಿ ಕೊಡಬೇಕಾದ ದರವನ್ನು ಅವರಿಗೆ ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆ ಮಾಡಲು ಸಾಧ್ಯವಿಲ್ಲವಾದರೆ ಸಬ್ಸಿಡಿ ಕೊಡಲಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ ರೈತ ಉತ್ಪಾದನೆ ಮಾಡತಕ್ಕಂಥ ಹಾಲಿಗೆ ಮಾತ್ರ ಲಾಭದಾಯಕವಾದ ರೇಟನ್ನು ಕೊಡಲೇಬೇಕು. ರೈತರ ಆರ್ಥಿಕ ಸ್ಥಿತಿ ಅಭಿವೃದ್ಧಿಯಾಗಬೇಕಾದರೆ, ದಿಟ್ಟ ಸಿಲುವನ್ನು ತೆಗೆದುಕೊಂಡು ಅವರಿಗೆ ಸಹಾಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ವೆಸ್ಟ್–ಬೆಂಗಾಳ್‌ದಲ್ಲಿ ಒಂದು ಲೀಟರ್ ಹಾಲಿಗೆ ೩–೪ ಪರ್ಸೆಂಟ್ ಫ್ಯಾಟ್ ಇರುವಂಥಾದ್ದು ನಾಲ್ಕು ರೂಪಾಯಿ ರೇಟ್ ಇದೆ. ಮಹಾರಾಷ್ಟ್ರದಲ್ಲಿ ಎರಡು ಸೀಸನ್ ರೇಟ್‌ಗಳಿವೆ. ರೈನೀಗ್ ಸೀಸನ್ ಮತ್ತು ಪೀಕ್ ಸೀಸನ್ ಎಂದು. ಮಳೆಗಾಲದಲ್ಲಿ ೩ ರೂಪಾಯಿ ೧೦ ಪೈಸೆ ಕೊಡುತ್ತಾರೆ. ಅದೇ ಬೇಸಿಗೆ ಕಾಲದಲ್ಲಿ ೩ ರೂಪಾಯಿ ೫೦ ಪೈಸೆ ಕೊಡುತ್ತಾರೆ ನಮ್ಮ ರಾಜ್ಯದಲ್ಲಿ ಕೊಡತಕ್ಕಂತಾದ್ದು ಈಗ ೩.೫ ಪರ್ಸೆಂಟ್ ಫ್ಯಾಟ್ ಇರತಕ್ಕಂಥ ಹಾಲಿಗೆ ೧ ರೂಪಾಯಿ ೭೫ ಪೈಸೆ ಕೊಡುತ್ತಾರೆ. ಇಷ್ಟೊಂದು ಚಿಕ್ಕ ಸಹಾಯ ಮಾಡಿದರೂ ಕೂಡ ಕೆಲವು ಮಿತ್ರರಿಗೆ ಸಹನೆ ಇಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು ಮಾನ್ಯ ರಾಮೇಗೌಡರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಹಿಂದೆ ಇವರು ಮಂತ್ರಿಯಾಗಿದ್ದರು ಮಂತ್ರಿಯಾಗಿದ್ದಾಗ ನಾವು ಅನೇಕ ಜನ ಸೇರಿ ಒಂದು ಸಮ್ಮೇಳನವನ್ನು ಮಾಡಿದೆವು. ಅದು ನಡೆದದ್ದು ಲಾಲ್‌ಬಾಗಿನ ಗ್ಲಾಸ್ ಹೌಸ್‌ನಲ್ಲಿ. ಶ್ರೀ ರಾಮೇಗೌಡರು ರೈತರ ಮನೆಯಿಂದ ಬಂದವರು. ಹೈನುಗಾರಿಕೆ ಬಗ್ಗೆ ಚೆನ್ನಾಗಿ ತಿಳಿದುಕೊಂಡವರು. ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ರೈತರಿಗೆ ಸಹಾಯ ಮಾಡಬೇಕು ಎಂದು ಕೇಳಿಕೊಂಡು ಗಂಟಲು ನೋಯಿಸಿಕೊಂಡು ಕೂಗಿ ಜೈಕಾರ ಹಾಕಿ ೨೦ ಪೈಸೆ ಮಾಡಿ ಎಂದು ಹೇಳಿದೆವು ೨ ಪೈಸೆಯನ್ನೂ ಕೊಡಲಿಲ್ಲ. ನಾನು ಹೇಳಿದೆ, ಏನು ರಾಮೇಗೌಡರೆ, ೫ ಪೈಸೆಯಾದರೂ ಕೊಡಿ ಎಂದು ಕೇಳಿದ್ದಕ್ಕೆ ನಾನೇನು ಮಾಡಲಯ್ಯ ಖಂಡಿತ ಕೊಡಬೇಕು ಅಂತ ಇದ್ದೆ. ಮುಂದಿನ ಸಲ ಕೊಡುತ್ತೇನೆ ಎಂದರು.

ಶ್ರೀ ಜಿ. ರಾಮೇಗೌಡರು.—ಸ್ವಾಮಿ, ಅವರನ್ನು ಅಮೆರಿಕಾಕ್ಕೆ ಕಳುಹಿಸಿ, ಅಲ್ಲಿ ಹೇಗೆ ಇದೆ ಎಂದು ನೋಡಿಕೊಂಡು ಬಂದು ಹೇಳಿ ಎಂದು ಹೇಳುವುದರೊಳಗೆ ನನ್ನ ಮಂತ್ರಿಪದವಿಯೂ ಹೋಯಿತು.

ಶ್ರೀ ಕೆ. ಹೆಚ್. ಹನುಮೇಗೌಡ.—ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಅವರು ಅಧಿಕಾರ ಬಿಟ್ಟಮೇಲೆ ಶ್ರೀ ವೈ. ರಾಮಕೃಷ್ಣ ಅವರು ಮಂತ್ರಿಗಳಾದ ಮೇಲೆ, ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಹೈನುಗಾರಿಕೆ ವಿಚಾರದಲ್ಲಿ ಅನೇಕ ಉತ್ತಮವಾದ ಕೆಲಸಗಳನ್ನು ಮಾನ್ಯ ಸಚಿವರು ಮಾಡಿದ್ದಾರೆ. ಮಾನ್ಯ ರಾಮೇಗೌಡರು ವಿರೋಧಪಕ್ಷದಲ್ಲಿ ಕುಳಿತಿರಬಹುದು. ಎಲ್ಲರೂ ವಿರೋಧವಾಗಿ ಮಾತನಾಡುತ್ತಾರೆಯೇ ಹೊರತು ಸೌಜನ್ಯಕ್ಕಾದರೂ ಒಂದು ಒಳ್ಳೆಯ ಮಾತು ಹೇಳುತ್ತಿಲ್ಲ ಎಂದು ಮಾನ್ಯ ರಾಮೇಗೌಡರಿಗೆ ತಿಳಿಸುವುದಕ್ಕೆ ಇಚ್ಚೆಪಡುತ್ತೇನೆ. ಬಹುಶಃ ಶ್ರೀ ರಾಮೇಗೌಡರು ಇದ್ದಿದ್ದರೆ ಆಪರೇಶನ್ ಫ್ಲಡ್–೨ನೇ ಕ್ಷೀರಧಾರೆ ಯೋಜನೆ ಬರುತ್ತಿತ್ತೋ ಇಲ್ಲವೋ ಕಾಣೆ. ಅನೇಕ ಉತ್ತಮವಾದ ಕೆಲಸಗಳನ್ನು ಮಾಡಿರುವಾಗ ಮಾನ್ಯ ವಿರೋಧಪಕ್ಷದ ಸದಸ್ಯರು ಒಬ್ಬರಾದರೂ ಇಂತಹ ಕೆಲಸ ಮಾಡಿದಿರಲ್ಲ ಎನ್ನುವ ಒಂದು ಮಾತಾದರೂ ಅವರ ಬಾಯಿಂದ ಬರದೇ ಹೋಯಿತು. ಹೊರಗಡೆ ಬಂದು ಭಾಷಣ ಮಾಡಿ. ಆಮೇಲೆ ನಿಮಗೆ ಗೊತ್ತಾಗುತ್ತದೆ.

SRI M.C. NANAIAH.—This is probably aspersions against opposition. In fact on several issues on several departments we have complimented for the good job they have done.

ಶ್ರೀ ಕೆ.ಹೆಚ್. ಹನುಮೇಗೌಡ.—ಮಾನ್ಯ ರಾಮೇಗೌಡರು ಬರಲಿಲ್ಲವಲ್ಲ.

ಶ್ರೀ ಎಂ.ಸಿ. ನಾಣಯ್ಯ.—ಇಡೀ ವಿರೋಧಪಕ್ಷದ ಮೇಲೆ ಅಪವಾದ ಹೊರಿಸಬಾರದು. ಮುಂದೆ ಕೆಲವು ಸಂದರ್ಭಗಳಲ್ಲಿ, there may be some halting of works ಮಾಡುತ್ತಾ ಇರತಕ್ಕಂಥಾ ಒಳ್ಳೆಯ ಕೆಲಸ ಎಲ್ಲಾದರೂ ಸ್ಥಗಿತಗೊಂಡಿತು ಎಂದು ಹೇಳುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ತಮ್ಮ ಈ ಅಭಿಪ್ರಾಯಕ್ಕೆ ತುಂಬಾ ಥ್ಯಾಂಕ್ಸ್.

ಶ್ರೀ ಪಿ. ರಾಮದೇವ್.—ಅದು ಹೋಗಲಿ, ಮಾನ್ಯ ರಾಮಕೃಷ್ಣರವರು ತಿರುಗಿ ತಮ್ಮನ್ನು ರಷ್ಯಾಕ್ಕೋ, ಯೂರೋಪಿಗೋ ಕಳಿಸಿಕೊಡುತ್ತಾರೆ, ಏನೂ ತೊಂದರೆಯಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಕೇಳಿಸಲಿಲ್ಲ, ರಿಪೀಟ್ ಮಾಡಿ.

ಶ್ರೀ ಪಿ. ರಾಮದೇವ್.—ಮಾನ್ಯ ರಾಮೇಗೌಡರು ಮಂತ್ರಿಗಳಾಗಿದ್ದಾಗ ರಾಮೇಗೌಡರನ್ನು ಹೊಗಳಿದರು, ಅವರು ಅಮೆರಿಕಾಕ್ಕೆ ಕಳಿಸಿಕೊಟ್ಟರು. ಈಗ ನಮ್ಮನ್ನು ಬೈದು ನಿಮ್ಮನ್ನು ಹೊಗಳುತ್ತಿದ್ದಾರೆ ಇದರ ಉದ್ದೇಶವಾದರೂ ಏನು ? ಹಿಂದೆ ಇಲ್ಲಿ ಬೇಕಾದಷ್ಟು ಬೈದಿದ್ದಾರೆ, ತಮ್ಮನ್ನು ಮಾತ್ರ ಹೊಗಳುತ್ತಾರೆ, ಇದರ ಉದ್ದೇಶವೇನು ? ತಮ್ಮ ಡಿಪಾರ್ಟ್‌ಮೆಂಟನ್ನು ಹೊಗಳತಕ್ಕ ಉದ್ದೇಶವೇನು ? ಇದರ ಗುರಿ ಒಂದು ಇದೆ.

ಶ್ರೀ ಡಿ.ಟಿ. ರಾಮು.—ಅವರು ಏಕೆ ಹಾಗೆ ಹೇಳುತ್ತಾರೆ ಎಂದರೆ, ನೀವು ಯಾವಾಗಲೂ ಪಟ್ಟಣದ ಬಗ್ಗೆ ಮಾತನಾಡುತ್ತೀರಿ, ಹಳ್ಳಿಗಳನ್ನು ಮರೆತುಬಿಡುತ್ತೀರಿ. ಆದ್ದರಿಂದ ಹಳ್ಳಿಗಳ ಕಡೆ ನಿಮ್ಮ ಗಮನ ಹೋಗಬೇಕು ಎಂದು ಮಾನ್ಯ ಹನುಮೇಗೌಡರು ಹೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ರಾಮದೇವ್ ಅವರಿಗೆ ಒಂದು ವಿಚಾರ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾವು ಯಾರನ್ನೂ ಹೊಗಳಿ, ಯಾವ ವಿಧವಾದ ಸ್ವಾರ್ಥವನ್ನು ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವಂಥವರಲ್ಲ. ನಾವು ರೈತರ ಮಕ್ಕಳು, ಇದ್ದರೆ ಊಟ ಮಾಡುತ್ತೇವೆ, ಇಲ್ಲದೆ ಹೋದರೆ ಹಾಗೇ ಇರುತ್ತೇವೆ. ಇಲ್ಲದ ವಂಚನೆ ಮಾಡಿ ಮೋಸಮಾಡಿ ಹೊಟ್ಟೆಹೊರಕೊಳ್ಳುವಂಥ ವಂಶಕ್ಕೆ ಸೇರಿದವರಲ್ಲ, ನಾವು ಹಳ್ಳಿಯ ರೈತರು. ಇದನ್ನು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಿ. ನಮಗೆ ಕನ್ನಿಂಗ್‌ನೆಸ್ ಆಗಲಿ, ಹೊಟ್ಟೆ ಹೊಡೆಯುವುದೇ ಆಗಲಿ, ಆ ಕೆಲಸ ಮುಗಿದಮೇಲೆ ತಿರುಗಿ ಕೊಂಡು ಬೈಯ್ಯುವುದೇ ಆಗಲಿ. ಹಳ್ಳಿ ರೈತರ ಮಕ್ಕಳಿಗೆ ಸೇರಿದ್ದಲ್ಲ ನೀತಿನಿಯಮದಿಂದ, ನಿಷ್ಠೆಯಿಂದ ಜೀವನದಲ್ಲಿ ನಡೆದುಕೊಳ್ಳುತ್ತಾ ಇದ್ದೇವೆ, ಇದನ್ನು ತಾವು ಮನಗಾಣಬೇಕು. ಈ ವಿಷಯದಲ್ಲಿ ಇಷ್ಟು ಮಾತನ್ನು ಹೇಳಿದ್ದೇನೆ ಈಗ ಮಿಲ್ಕ್ ಬಗ್ಗೆ ಹೇಳುವುದಾದರೆ, ಆಕಸ್ಮಾತ್ ಏನಾದರೂ ಕನ್‌ಸ್ಯೂಮರ್ಸ್‌ಗೆ ಮಿಲ್ಕ್ ರೇಟ್ ಜಾಸ್ತಿಯಾಗುತ್ತದೆ ಎನ್ನುವ ಭಾವನೆ ಇದ್ದರೆ ಸಬ್ಸಿಡಿ ಕೊಡಬಹುದು ಮೊನ್ನೆ ಆಂಧ್ರಪ್ರದೇಶ ಸರ್ಕಾರದವರು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಈಗ ರೈತರಿಗೆ ಕೊಡುವ ಹಾಲಿನ ರೇಟು ಜಾಸ್ತಿ ಮಾಡಬೇಕು ಮತ್ತು ಕನ್‌ಸ್ಯೂಮರ್ಸ್‌ಗೆ ಅನುಕೂಲವಾಗುವ ಹಾಗೆ ಸಬ್ಸಿಡಿ ಕೊಡಬೇಕು ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಮಹಾರಾಷ್ಟ್ರ ಸರ್ಕಾರದವರು ಸಬ್ಸಿಡಿಯನ್ನು ಕೊಡುತ್ತಾ ಇದ್ದಾರೆ, ಆದಂದರಿಂದ ಕನ್‌ಸ್ಯೂಮರ್ಸ್ ಹಿತ ಕಾಪಾಡುವುದು ಸರ್ಕಾರದ ಆದ್ಯ ಕರ್ತವ್ಯ ಎನ್ನುವುದಾದರೆ ದಯವಿಟ್ಟು ಸರ್ಕಾರದಿಂದ ಸಬ್ಸಿಡಿ ಕೊಟ್ಟು. ರೈತರಿಗೆ ಜಾಸ್ತಿ ರೇಟು ಕೊಟ್ಟು ಕನ್‌ಸ್ಯೂಮರ್ಸ್‌ಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಪಿ. ರಾಮದೇವ್.—ತಾವು ಎಷ್ಟು ಹಸುಗಳನ್ನು ಸಾಕಿದ್ದೀರಿ ?

ಶ್ರೀ ಕೆ ಹೆಚ್. ಹನುಮೇಗೌಡ.—ವ್ಯವಸಾಯ ಮಾಡದೇ ಬರೀ ಬುರುಡೆ ಹೊಡೆದುಕೊಂಡು ತಿರುಗುವವರಲ್ಲ ನಾವು. ನಾವು ವ್ಯವಸಾಯಗಾರ ಮನೆತನದಿಂದ ಬಂದವರು, ನಾವು ವ್ಯವಸಾಯ ಮಾಡುತ್ತಾ ಇರುವುದು, ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ನಿಮಗೆ ಹಳ್ಳಿಯ ವಿಚಾರ ಗೊತ್ತಿಲ್ಲ. ಟೌನಿನಲ್ಲಿ ಸೇರಿಕೊಂಡು, ಭಾಷಣ ಮಾಡಿಕೊಂಡು ಒಳ್ಳೊಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಇರುವವರಿಗೆ ಹಳ್ಳಿಯ ಜನರ ಕಷ್ಟಸುಖ ನಿಮಗೇನು ಗೊತ್ತಿಲ್ಲ, ಏಕೆ ಮಾತನಾಡುತ್ತೀರಿ ಮಾನ್ಯ ಸಚಿವರು ಹಿಂದೆ ಎರಡು ಸಾರಿ ಹಾಲಿನ ರೇಟನ್ನು ಕೊಟ್ಟಾಗ ರೈತರು ಕೊಂಡುಕೊಳ್ಳತಕ್ಕ ಪದಾರ್ಥಗಳ ಬೆಲೆ ಇಷ್ಟೊಂದು ಗಗನಕ್ಕೆ ಹೋಗಿರಲಿಲ್ಲ. ಈಗ ರೇಟು ಜಾಸ್ತಿಯಾಗಿದೆ. ಮೊನ್ನೆ ರೈತರ ಪ್ರತಿನಿಧಿಗಳು ಬಂದು ಮಾನ್ಯ ಸಚಿವರನ್ನು ಭೇಟಿಮಾಡಿ. ಹಿಂದೆ ಎರಡು ಸಾರಿ ರೇಟನ್ನು ಜಾಸ್ತಿ ಮಾಡಿ ಕೊಟ್ಟರಿ, ಬಹಳ ಸಂತೋಷ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ನೀವು ಕೊಡುತ್ತಾ ಇರತಕ್ಕಂಥ ರೇಟು ನಮಗೆ ಸಾಕಾಗುವುದಿಲ್ಲ, ಜಾಸ್ತಿ ಕೊಡಬೇಕಾಗಿದೆ ಎಂದು ಹೇಳಿದಾಗ, ಫೆಡರೇಷನ್ ಮಾಡುತ್ತೇವೆ, ಫೆಡರೇಷನ್ ಆದಾಗ ನಾವು ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳಿದರು. ಮಾನ್ಯ ಸಚಿವರನ್ನು ತಮ್ಮ ಮುಖಾಂತರ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏನೆಂದರೆ, ಸದ್ಯಕ್ಕೆ ಹಾಲಿನ ರೇಟು ಜಾಸ್ತಿ ಮಾಡಲೇಬೇಕು, ಒಂದು ಪಕ್ಷ ಯಾವುದಾದರೂ ಕಾರಣದಿಂದ ಎರಡು ತಿಂಗಳು, ಮೂರು ತಿಂಗಳು

ಮಾಡುವುದಕ್ಕೆ ಆಗದೇಹೋದರೆ, ಕೊನೇಪಕ್ಷ ರೇಟನ್ನು ಜಾಸ್ತಿ ಮಾಡಿ. ಕನ್‌ಸ್ಯೂಮರ್ಸ್‌ಗೆ ಸಬ್ಸಿಡಿ ಕೊಡುವುದು ಒಂದು. ಎರಡನೆಯದು ರೈತರು ದನಗಳಿಗೆ ಉಪಯೋಗಿಸತಕ್ಕ ಕ್ಯಾಟಲ್‌ಫೀಡ್ ಇದೆಯಲ್ಲಾ ಆ ಕ್ಯಾಟಲ್‌ಫೀಡ್‌ಗೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದವರು ಸಬ್ಸಿಡಿ ಕೊಡುತ್ತಿದ್ದಾರೆ. ಕೊನೇ ಪಕ್ಷ ಒಂದು ಕೆ.ಜಿ ಗೆ ೫೦ ಪೈಸೆ, ೩೦ ಪೈಸೆ ಸಬ್ಸಿಡಿ ಕೊಟ್ಟು ಅವರಿಗೆ ಆರ್ಥಿಕವಾಗಿ ಭಾರ ಹೆಚ್ಚು ಆಗದಹಾಗೆ ಏನಾದರೂ ಒಂದು ಕೆಲಸವನ್ನು ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೇ ವಿಚಾರ ಏನೆಂದರೆ. ಮಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಮಾಡುತ್ತೇವೆಂದು ಮಾನ್ಯ ಸಚಿವರು ಆದೇಶ ಕೊಟ್ಟಿದ್ದಾರೆ. ಬಹುಶ ಆಪರೇಷನ್ ಫ್ಲಡ್–೨ ಅನ್ನು ತಡೆ ಹಿಡಿಯಬೇಕಾದರೆ, ಅಧಿಕಾರಿಗಳಿಗೆ ಮೂಲ ಉದ್ದೇಶವೇನೆಂದರೆ. ಈ ಫೆಡರೇಷನ್ ಆದರೆ ರೈತರು ಸಂಘ ಕಟ್ಟಿಕೊಂಡು ರೈತರು ವ್ಯವಹಾರವನ್ನು ಮಾಡಿಕೊಳ್ಳುವುದಕ್ಕೆ ಆಗಬಾರದು, ಇದನ್ನು ಮಾಡಿದರೆ ಈ ದೇಶದ ರೈತರು ಅಭಿವೃದ್ಧಿ ಹೊಂದಿಬಿಡುತ್ತಾರೆ ಎನ್ನುವ ದೃಷ್ಟಿಯಿಂದ ಇದನ್ನು ವಿರೋಧಮಾಡಿದರು. ಬಹುಶ: ಆಪರೇಷನ್ ಫ್ಲಡ್–೨ಗೆ ಅಗ್ರಿಮೆಂಟ್ ಆಗಿದೆ. ಅದು ಜಾರಿಗೆ ಬರುವುದರಲ್ಲಿದೆ, ಮಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಆದಷ್ಟು ಜಾಗ್ರತೆ ಒಂದು ತಿಂಗಳಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ, ಮಾಡಿದರೆ ಬಹಳ ಸಂತೋಷ, ಆದಷ್ಟು ಜಾಗ್ರತೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇನ್ನೊಂದು ವಿಚಾರವೇನೆಂದರೆ. ಗ್ರಾಮಾಂತರ ಪ್ರದೇಶದ ಹೈನುಗಾರಿಕೆ ಅಭಿವೃದ್ಧಿಗೆ ಬ್ಯಾಂಕಿನಿಂದ ಸಾಲ ಕೊಡುವುದಕ್ಕೆ ಒಂದು ವ್ಯವಸ್ಥೆ ಇದೆ. ೨೦ ಪಾಯಿಂಟ್ ಪ್ರೊಗ್ರಾಂ ಮೀಟಿಂಗ್‌ನಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಹೈನುಗಾರಿಕೆ ಅಭಿವೃದ್ಧಿಗೆ ಬ್ಯಾಂಕಿನಿಂದ ಸಾಲ ಕೊಡುವುದು ಎಷ್ಟು ನಿಗಧಿಯಾಗಿದೆ, ಕೊಟ್ಟಿರುವುದು ಎಷ್ಟು ಎಂದು ಕೇಳಿದರು, ಮಾನ್ಯ ಸಚಿವರು ಎರಡು ತಿಂಗಳ ಹಿಂದೆ ಹಾಸನಕ್ಕೆ ಬಂದಿದ್ದಾಗ ಕೆನರಾ ಬ್ಯಾಂಕ್ ಒಂದೂವರೆ ಕೋಟಿ ರೂಪಾಯಿಗಳ ಸಾಲ ಕೊಡುತ್ತದೆ ಎಂದು ಹೇಳಿ ಬಂದಿದ್ದರು. ಆವತ್ತು ನಾನೇ ಪ್ರಶ್ನೆ ಕೇಳಿದೆ, ಒಂದೂವರೆ ಕೋಟಿ ರೂಪಾಯಿಗಳ ಸಾಲ ಕೊಡುತ್ತೇವೆ ಎಂದು ಹೇಳಿ ಬಂದಿದ್ದೀರಿ, ಎಷ್ಟು ಕೊಟ್ಟಿದ್ದೀರಾ ಎಂದು ಕೇಳಿದಾಗ ನಾವು ಸಾಲ ಕೊಡುವುದಕ್ಕೆ ತಯಾರಾಗಿದ್ದೇವೆ, ಆದರೆ ರಿಸರ್ವ್ ಬ್ಯಾಂಕ್‌ನಲ್ಲಿ ೬ ರಿಸ್ಟ್ರಿಕ್ಷನ್ ಇವೆ, ಆ ರಿಸ್ಟ್ರಿಕ್ಷನ್ ಪ್ರಕಾರ ನಾವು ಹೆಚ್ಚಿಗೆ ಕೊಡಲಿಕ್ಕೆ ಆಗಲಿಲ್ಲ ಎಂದು ಹೇಳಿದರು. ಅವು ಯಾವುವು ಹೇಳಿ ಎಂದು ಕೇಳಿದಾಗ ಅವರು ಹೇಳುತ್ತಾ ಹೋದರು. ಉದಾಹರಣೆಗೆ ಒಂದು ಮಾತ್ರ ಹೇಳುತ್ತೇನೆ. ಹೀಗೆ ರೈತರಿಗೆ ಬರತಕ್ಕ ಸಾಲ ಬ್ಯೂರೊಕ್ರೆಟಿಕ್ ಸೆಟ್ ಅಪ್‌ನಲ್ಲಿ ರೈತರಿಗೆ ತಲುಪುವುದಿಲ್ಲ. ಸರ್ಕಾರಕ್ಕೆ ರೈತರಿಗೆ ಸಾಲ ಕೊಡಬೇಕು ಎನ್ನತಕ್ಕ ಉದ್ದೇಶವಿದ್ದರೂ ಕೂಡ ರೈತರಿಗೆ ಅದು ತಲುಪುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಮಿಲ್ಕ್ ಬೂತ್ ಇಲ್ಲದೇಹೋದರೆ ನಾವು ಹಸುಗಳಿಗೆ ಸಾಲ ಕೊಡುವುದಿಲ್ಲ ಎನ್ನುವುದು ಬ್ಯಾಂಕ್‌ನವರ ವಾದ. ಯೂನಿಯನ್ ಛೇರ್ಮನ್ ಇದ್ದರು. ಅವರನ್ನು ಏನು ಸ್ವಾಮಿ, ಅವರು ಹೀಗೆ ಹೇಳುತ್ತಿದ್ದಾರಲ್ಲ, ನೀವು ಏಕೆ ಮಿಲ್ಕ್ ಬೂತನ್ನು ಓಪನ್ ಮಾಡಬಾರದು ಎಂದು ಕೇಳಿದಾಗ, ಅಲ್ಲಿ ಹಾಲೇ ಇಲ್ಲ ಹನುಮೇಗೌಡರೆ ಆದ್ದರಿಂದ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು: ಇವರು ಸಾಲ ಕೊಟ್ಟು ಹಸುವನ್ನು ತೆಗೆದುಕೊಂಡು ಹೋಗುವ ಹಾಗಿಲ್ಲ, ಹಾಲು ಇದ್ದ ಹೊರತು ಇವರು ಬೂತ್ ಓಪನ್ ಮಾಡುವ ಹಾಗಿಲ್ಲ. ಹೀಗಾದರೆ ಹಳ್ಳಿ ರೈತರಿಗೆ ಸಾಲ ಸಿಕ್ಕಿದ ಹಾಗೆ ಆಯಿತೇ ! ಇದು ಒಂದು ಕಂಡೀಷನ್. ಎರಡನೆಯ ಕಂಡೀಷನ್ ಏನೆಂದರೆ ೪ ಸಾವಿರ ರೂಪಾಯಿಗಳ ಮೇಲ್ಪಟ್ಟು ಇರತಕ್ಕಂಥ ಉತ್ತಮತಳಿಯ ಹಸುಗಳನ್ನು ಮಾತ್ರ ಕೊಡುವುದಕ್ಕೆ ಅವಕಾಶವಿದೆ. ಉಳಿದವಕ್ಕೆ ಕೊಡುವುದಕ್ಕೆ ಅವಕಾಶವಿಲ್ಲ ಎಂದು ಇದೆ. ಹೀಗಾಗಿ ಒಟ್ಟಿನಲ್ಲಿ ರೈತನಿಗೆ ಸಾಲ ದೊರೆಯುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮದರ್ ಡೈರಿ ಪ್ಲಾಂಟನ್ನು ಬೆಂಗಳೂರಿನ ಯಲಹಂಕದ ಹತ್ತಿರ ಓಪನ್ ಮಾಡಿದಾಗ ಒಂದು ಮಾತನ್ನು ಘೋಷಣೆ ಮಾಡಿದರು ಗ್ರಾಮಾಂತರ ಪ್ರದೇಶದ ಹೈನುಗಾರಿಕೆ ಅಭಿವೃದ್ಧಿ ಮತ್ತು ಡೆವಲಪ್‌ಮೆಂಟ್ ಅಕ್ಟಿವಿಟೀಸ್ ಈ ಕೆಲಸಕಾರ್ಯಗಳಿಗೆ ಕಮರ್ಷಿಯಲ್ ಬ್ಯಾಂಕ್‌ನಿಂದ ಹಣ ಸಕಾಲದಲ್ಲಿ ಬರುವುದಿಲ್ಲ ಎಂದು ಸರ್ಕಾರಕ್ಕೆ ಗೊತ್ತಾಗಿದೆ, ಆದ್ದರಿಂದ ಒಂದು ಡೈರಿ ಫಾರ್ಮರ್ಸ್ ಕೋಆಪರೇಟೀವ್ ಬ್ಯಾಂಕನ್ನು ಮಾಡಬೇಕು ಎಂದು ಸರ್ಕಾರದ ಯೋಜನೆ ಇದೆ, ಆ ರೀತಿ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರು. ಮಾನ್ಯ ಸಚಿವರನ್ನು ತಮ್ಮ ಮುಖಾಂತರ ಕೇಳುತ್ತೇನೆ. ಏನೆಂದರೆ, ಮಾನ್ಯ ಮುಖ್ಯ ಮಂತ್ರಿಗಳ ಈ ಆಶ್ವಾಸನೆ ಯಾವ ಹಂತದಲ್ಲಿ ನಿಂತಿದೆ ಎಂದು. ಇನ್ನೊಂದು ವಿಚಾರ ಏನೆಂದರೆ, ಈಗ ವರ್ಲ್ಡ್ ಬ್ಯಾಂಕ್‌ನಿಂದ ೫೫ ಕೋಟಿ ರೂಪಾಯಿಗಳ ಹಣ ಬಂತಲ್ಲ ಅದು ವರ್ಲ್ಡ್ ಬ್ಯಾಂಕ್‌ನವರು ಇಂಡಿಯಾ ದೇಶಕ್ಕೆ ೫೫ ಕೋಟಿ ರೂಪಾಯಿಗಳ ದುಡ್ಡು ಕೊಟ್ಟಿರುವುದು ಅರ್ಧ ಪರ್ಸೆಂಟಿಗೆ, ಅದು ಅಲ್ಲಿಂದ ರಿಸರ್ವ್

ಬ್ಯಾಂಕ್‌ಗೆ ಬರುತ್ತದೆ, ಅವರು ನಾಲ್ಕು ಪರ್ಸೆಂಟ್ ತೆಗೆದುಕೊಳ್ಳುತ್ತಾರಂತೆ. ಅಲ್ಲಿಂದ ಎ.ಆರ್ ಡಿ.ಸಿ.ಗೆ ಹೋಯಿತು ಎಂದರೆ ಅವರು ಅಲ್ಲಿ ೩ ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ಸುಮ್ಮನೆ ಈ ಆಫೀಸ್ ಬಿಟ್ಟು ಆ ಆಫೀಸಿಗೆ ಹೋಗುವುದಕ್ಕೆ ಎರಡು ಮೂರು ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ಅಲ್ಲಿಂದ ಕಮರ್ಷಿಯಲ್ ಬ್ಯಾಂಕ್‌ಗೆ ಹೋಗುತ್ತದೆ. ಇಲ್ಲಿಂದ ಬಂದು ರೈತರಿಗೆ ತಲುಪಬೇಕಾದರೆ ೧೧–೧೨ ಪರ್ಸೆಂಟ್ ಆಗುತ್ತದೆ. ಯಾವ ದೇಶದಲ್ಲಿ ಉಂಟು ಈ ಅನ್ಯಾಯ, ಹಗಲು ದರೋಡೆ ಏಕೆ ಈ ದೇಶದಲ್ಲಿ ದಯವಿಟ್ಟು ಹೇಳಿ. ಒಂದು ಕಡೆ ರೈತರ ಮಾತು ಹೇಳುತ್ತೇವೆ ಇನ್ನೊಂದು ಕಡೆ ವರ್ಲ್ಡ್ ಬ್ಯಾಂಕ್ ನಿಂದ ಹಣವನ್ನು ತಂದಿದ್ದೇವೆಂದು ಹೇಳುತ್ತೇವೆ. ಅರ್ಧ ಪರ್ಸೆಂಟಿಗೆ ತಂದಂಥ ಹಣವನ್ನು ೩–೪ ಕಡೆ ಚೆಕ್ಕಿಗೆ ಬರೀ ಒಂದೊಂದು ರುಜು ಹಾಕುವುದಕ್ಕೆ ಇವರು ೧೦–೧೧ ಪರ್ಸೆಂಟ್ ಹೊಡೆದು ರೈತರಿಗೆ ೧೨–೧೩ ಪರ್ಸೆಂಟ್ ಹಾಕುತ್ತಾರಲ್ಲ ಇದಕ್ಕಿಂತಲೂ ಹಗಲು ದರೋಡೆ, ವಂಚನೆ ಏನಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಮಾನ್ಯ ಸಚಿವರನ್ನು ರೈತರ ಪರವಾಗಿ ಕೈಮುಗಿದು ಕೇಳಿಕೊಳ್ಳುತ್ತೇನೆ, ಡೈರಿ ಫಾರ್ಮರ್ಸ್ ಕೊ–ಆಪರೇಟಿವ್ ಬ್ಯಾಂಕನ್ನು ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಏನು ಘೋಷಣೆ ಮಾಡಿದ್ದಾರೋ ಅದನ್ನು ತಕ್ಷಣ ಮಾಡುವುದರಿಂದ ಐದಾರು ಪರ್ಸೆಂಟ್‌ನಲ್ಲಿ ಸಾಲವನ್ನು ವಿತರಣೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಲಕ್ಷಾವಧಿ ರೈತರ ಹಿತದೃಷ್ಟಿಯಿಂದ ಆದಷ್ಟು ಜಾಗ್ರತೆ ಡೈರಿ ಫಾರ್ಮರ್ಸ್ ಕೋಆಪರೇಟೀವ್ ಬ್ಯಾಂಕನ್ನು ಮಾಡಬೇಕು ಎಂದು ಮಾನ್ಯ ಸಚಿವರನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ.

೫–೩೦ ಪಿ. ಎಂ.

ಶ್ರೀ ಬಿ. ವಿ. ಕಕ್ಕಿಲಾಯ —ವರ್ಲ್ಡ್‌ಬ್ಯಾಂಕ್‌ನವರು ೧/೨ ಪರ್ಸೆಂಟ್ ಚಾರ್ಜ್ ಮಾಡುತ್ತಾರೆ, ಒಟ್ಟು ಅದು ೧೧ ಪರ್ಸೆಂಟ್ ಆಗುತ್ತದೆಂದು ತಾವು ಹೇಳಿದಿರಿ. ಆದರೆ ಇವರ ಮಧ್ಯದಲ್ಲಿ ಮಧ್ಯವರ್ತಿಗಳು ಸೇರಿ ೧೧ ರಿಂದ ೧೩ ಪರ್ಸೆಂಟ್ ಆಗಬಹುದೇನೋ ಎನ್ನುವ ಭಯ ಇದೆ, ಇದಕ್ಕೆ ಹೇಳುತ್ತಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ವರ್ಲ್ಡ್ ಬ್ಯಾಂಕ್‌ನಿಂದ ರಿಜರ್ವ್ ಬ್ಯಾಂಕ್‌ಗೆ ಬರುತ್ತದೆ ಅಲ್ಲಿಂದ ಡೈರೆಕ್ಟಾಗಿ ಫಾರ್ಮರ್ಸ್‌ಗೆ ಕೊಟ್ಟರೆ ೩–೪ ಪರ್ಸೆಂಟ್ ಬೀಳುತ್ತದೆ. ಅದನ್ನು ಬಿಟ್ಟು ನೀವು ಮಧ್ಯದಲ್ಲಿ ಇನ್ನು ೨-೩ ಏಜೆಂಟ್‌ಗಳನ್ನು ಮಾಡುವುದರಿಂದ ಅವರಿಗೆ ೬–೭ ಪರ್ಸೆಂಟ್ ಇನ್ನೂ ಹೆಚ್ಚಿಗೆ ಹೊರೆ ಬೀಳುತ್ತದೆ. ಆದುದರಿಂದ ಅದನ್ನು ರದ್ದು ಮಾಡಿ ರಿಜರ್ವ್ ಬ್ಯಾಂಕಿನಿಂದ ಅವರಿಗೆ ನೇರವಾಗಿ ಹಣ ಕೊಡಿಸುವುದಕ್ಕೆ ಅವಕಾಶವಿದೆ, ಆ ರೀತಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮದರ್ ಡೈರಿ ಪ್ಲಾಂಟ್‌ನ್ನು ಮಾಡುವ ಉದ್ದೇಶದಿಂದ ಸುಮಾರು ೮೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಅದರಲ್ಲಿ ಸುಮಾರು ೩೦೦ ಬಲ್ಕ್ ವೆಂಡಿಂಗ್ ಬೂತ್‌ಗಳನ್ನು ನಮ್ಮ ರಾಜ್ಯದ ಎಲ್ಲಾ ದೊಡ್ಡ ದೊಡ್ಡ ನಗರಗಳಲ್ಲೂ ಸ್ಥಾಪನೆ ಮಾಡಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಇದರಿಂದ ಮಧ್ಯವರ್ತಿ ಏಜೆಂಟ್‌ರ್‌ಗಳನ್ನು ತೆಗೆದುಕೊಂಡು ಅಡಲ್ಟ್ರೇಷನ್ ಆಗದೇ ಹಾಲನ್ನು ಒದಗಿಸುವ ಬಗ್ಗೆ ಯೋಜನೆ ಮಾಡಿದ್ದೀರಿ. ಇದು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ, ಬೆಂಗಳೂರಿನಲ್ಲಿ ಕೆಲವು ಕಡೆ ಮಾತ್ರ ಈ ಬಲ್ಕ್ ವೆಂಡಿಂಗ್ ಬೂತ್‌ಗಳನ್ನು ತೆರೆದಿದ್ದೀರಿ, ಇನ್ನು ಬಾಕಿಯುವುಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳವರು ತಮ್ಮ ಉತ್ತರದಲ್ಲಿ ತಿಳಿಸಬೇಕು. ಇದನ್ನು ಇತರೇ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಮಾಡುತ್ತೇವೆಂದು ಹೇಳಿದ್ದೀರಿ ಇನ್ನು ಎಷ್ಟು ದಿವಸಗಳಲ್ಲಿ ಇದನ್ನು ಮಾಡುತ್ತೀರಿ ಎಂಬುದನ್ನು ಸಹ ದಯಮಾಡಿ ತಿಳಿಸಬೇಕೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಳೆಗಾಲದಲ್ಲಿ ಹೆಚ್ಚುವರಿ ಬರತಕ್ಕ ಹಾಲನ್ನು ಪೌಡರ್ ಮಾಡುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ೫ ಟನ್‌ನ ಪ್ಲಾಂಟ್ ಕಮಿಷನ್ ಆಗಿದೆಂದು ಕೇಳಿದ್ದೇನೆ. ಕಮಿಷನ್ ಆಗಿದ್ದರೆ ಒಂದು ವರ್ಷಕ್ಕೆ ಎಷ್ಟು ಪೌಡರನ್ನು ಉತ್ಪತ್ತಿ ಮಾಡುತ್ತಿದ್ದೀರಿ ಎಂಬುದನ್ನು ತಿಳಿಸಬೇಕು. ಮಂಡ್ಯ ಜಿಲ್ಲೆಯ ಹತ್ತಿರ ಗೆದ್ದಲಗೆರೆಯಲ್ಲಿ ಸುಮಾರು ೧೦ ಟನ್‌ನ ಪ್ಲಾಂಟ್ ಮಿಲ್ಕ್ ಪೌಡರ್ ಮಾಡುವುದು ಕಾರ್ಯಗತವಾಗುತ್ತಿದೆಂದು ಕೇಳಿದ್ದೇನೆ. ಅದು ಕಮಿಷನ್ ಆಗಿದೆಯೋ, ಅಲ್ಲಿ ಕೆಲಸ ಏನಾದರೂ ಇನ್ನೂ ನಡೆಯುತ್ತಿದೆಯೋ ಎಂಬುದರ ಬಗ್ಗೆ ಸಹ ಮಾನ್ಯ ಮಂತ್ರಿಗಳವರು ತಿಳಿಸಬೇಕೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಒಬ್ಬ ಸದಸ್ಯರು.—ಹಾಲಿನ ಪೌಡರ್ ಮಾಡುವುದು ಆಗಿದೆಯೋ ಎಂದು ಕೇಳುತ್ತಿದ್ದಾರೆ ಹಾಲೇ ಸರಿಯಾಗಿ ಸಿಗುತ್ತಿಲ್ಲ, ಇನ್ನು ಎಲ್ಲಿಂದ ಪೌಡರನ್ನು ಮಾಡುವುದಕ್ಕೆ ಹೋಗುತ್ತಾರೆ ?

ಶ್ರೀ ಕೆ. ಎಚ್. ಹನುಮೇಗೌಡ.—ಮಳೆಗಾಲದಲ್ಲಿ ಹಸಿರು ಹುಲ್ಲು ಜಾಸ್ತಿಯಾಗುತ್ತದೆ, ಆಗ ಯಥೇಚ್ಛವಾಗಿ ಹಾಲು ಬರುತ್ತದೆ ಅದನ್ನು ಡಿಸ್ಪೋಸ್ ಅಫ್ ಮಾಡುವುದು ಹೇಗೆ ? ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆಂದು ಕಾಣುತ್ತದೆ ಕಳೆದ ಒಂದೆರೆಡು ವರ್ಷಗಳ ಹಿಂದೆ ಹೀಗೆ ಹಾಲು ಯಥೇಚ್ಛವಾಗಿ ಬಂದಾಗ ಕಡಿಮೆ ರೇಟ್‌ನಲ್ಲಿ ಆಂಧ್ರ ಪ್ರದೇಶ ಮತ್ತು ಮದ್ರಾಸ್ ರಾಜ್ಯಕ್ಕೆ ಮಾರಿದ್ದಾರೆ. ಆದುದರಿಂದ ಮಳೆಗಾಲದಲ್ಲಿ ಹೆಚ್ಚಿಗೆ ಬರತಕ್ಕ ಹಾಲನ್ನು ಪೌಡರನ್ನಾಗಿ ಮಾಡಿಟ್ಟುಕೊಂಡು ಬೇಸಿಗೆ ಕಾಲದಲ್ಲಿ ಹಾಲು ಕಡಿಮೆಯಾದಾಗ ಅದನ್ನು ಹಾಲನ್ನಾಗಿ ಮಾಡಿ ಹಂಚುವ ವ್ಯವಸ್ಥೆ ಇದೆ, ಆದಕ್ಕೆ ನಾನು ಈ ಮಾತನ್ನು ಹೇಳುತ್ತಿರುವುದು. ಸ್ವಾಮಿ, ಇನ್ನೊಂದು ವಿಚಾರ ಹೇಳುವುದಾದರೆ, ಕೆ.ಡಿ.ಡಿ.ಸಿ.ಯ ಯೋಜನೆಯಲ್ಲಿ ಫಾಡರ್ ಡೆವಲಪ್‌ಮೆಂಟ್ ಸ್ಕೀಂ ಎಂದು ಇದೆ. ೪–೬ ಅಧಿಕಾರಿಗಳು ಇದ್ದಾರೆ, ಅವರಿಗೆ ಜೀಪ್, ಇದೆ ಎಲ್ಲಾ ವ್ಯವಸ್ಥೆ ಇದೆ. ಈ ಹೈಬ್ರಿಡ್ಜ್ ನೇಪಿಯರ್ ಗ್ರಾಸ್ ರೂಟ್ ಮತ್ತು ಕುವಾಚ್ ಸಸಿ ಇವುಗಳನ್ನು ವಿತರಣೆ ಮಾಡುವುದಕ್ಕೆ ವ ವಸ್ಥೆ ಇದೆ, ಮತ್ತು ಇಷ್ಟು ಲಕ್ಷ ಎಕರೆಗೆ ಎಷ್ಟು ಸೀಡ್ಸ್‌ನ್ನು ಕೊಟ್ಟಿದ್ದೇವೆಂದು ಅಂಕಿ ಅಂಶಗಳನ್ನು ತಾವು ಏನು ಕೊಟ್ಟಿದ್ದೀರಿ, ನನಗೆ ತಿಳಿದ ಪ್ರಕಾರ ಅದರಲ್ಲಿ ೨ ಪರ್ಸೆಂಟ್ ಕೂಡ ಅವರು ಕೊಟ್ಟಿಲ್ಲ. ಇದಕ್ಕೆ ತಮಗೊಂದು ಸಲಹೆ ಮಾಡುವುದೇನೆಂದರೆ, ಈ ನೇಪಿಯರ್ ಗ್ರಾಸ್ ರೂಟನ್ನು ಹಂಚುವುದಕ್ಕೆ ತಾವು ಏನು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ, ಅದರ ಬದಲು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದು ಊರಿನಲ್ಲಿ ಗೋಮಾಳವಿದೆ, ೮–೧೦ ಎಕರೆ ಜಮೀನನ್ನು ಡಿ.ಸಿ.ಯವರಿಗೆ ಕೇಳಿದರೆ ಕೊಡುತ್ತಾರೆ, ಅಂಥಾ ಜಾಗದಲ್ಲಿ ಸೊಸೈಟಿಗಳ ಮುಖಾಂತರವಾಗಿ ಪಂಪ್ ಹಾಕಿ ೧೦–೧೫ ಎಕರೆಯಲ್ಲಿ ಹುಲ್ಲನ್ನು ಬೆಳೆದರೆ ಹಸಿರು ಹುಲ್ಲು ಸಿಗುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ಯೋಜನೆಯನ್ನು ಸಾಧ್ಯವಾದಷ್ಟು ಬೇಗ ಜಾರಿಗೆ ತರಬೇಕೆಂದು ಮಾನ್ಯ ಸಚಿವರಲ್ಲಿ ತಿಳಿಸುತ್ತೇನೆ. ಇನ್ನು ಸುಯೆರೇಜ್ ವಾಟರ್ ಏನು ವ್ಯರ್ಥವಾಗಿ ಹೋಗುತ್ತದೆ ಅದರಿಂದ ೧೦–೧೫ ಎಕರೆಯಲ್ಲಿ ಹಸಿರು ಹುಲ್ಲನ್ನು ಬೆಳೆದಿದೆ ರೈತರ ದನ ಕರುಗಳಿಗೆ ಹಸಿರು ಹುಲ್ಲನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಆ ಕೊಳಚೆ ನೀರನ್ನು ಹಳ್ಳಕ್ಕೆ ಬಿಟ್ಟು ಆದರಿಂದ ಸುತ್ತಮುತ್ತಲಿನ ಜನರ ಆರೋಗ್ಯ ಕೆಡುವುದನ್ನು ತಪ್ಪಿಸಿದ ಹಾಗೂ ಆಗುತ್ತದೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನೀವು ಈಗಾಗಲೇ ೨೫ ನಿಮಿಷ ತೆಗೆದುಕೊಂಡಿದ್ದೀರಿ, ಆದಷ್ಟು ಬೇಗ ಮುಗಿಸಿ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ರಾಮೇಗೌಡರವರು ಮಾತನಾಡುತ್ತಾ ಹಳ್ಳಿಗಳಲ್ಲಿ ಕುರಿಗಳ ಸಂತತಿಯೇ ನಶಿಸಿ ಹೋಗುತ್ತಿದೆಯೆಂದು ಹೇಳುತ್ತಿದ್ದರು, ಇದಕ್ಕಾಗಿ ಊಲ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಏನಿದೆ ಅದಕ್ಕೆ ಅಲ್ಲಿ ನೀವು ಸಾಕಷ್ಟು ಹಣವನ್ನು ಖರ್ಚು ಮಾಡಿದರೂ ಸಹ ಅದು ಕೇವಲ ಅಲ್ಲಿ ಕೆಲಸ ಮಾಡತಕ್ಕವರ ಸಂಬಳ ಸಾರಿಗೆಗೇ ಖರ್ಚು ಆಗುತ್ತಿದೆಯೇ ವಿನ: ಇನ್ನು ಯಾವುದೇ ವಿಧವಾದಂಥ ಅಭಿವೃದ್ಧಿಯ ಕಾರ್ಯಕ್ರಮಗಳು ಆಗುತ್ತಿಲ್ಲ. ಆದುದರಿಂದ ಮಾನ್ಯ ಸಚಿವರು ಇದರ ಕಡೆಗೆ ಗಮನ ನೀಡಬೇಕೆಂದು ಹೇಳುತ್ತೇನೆ, ಕಳೆದ ವರ್ಷ ಸಾವಿರಾರು ಕುರಿಗಳನ್ನು ಬಡ ರೈತರು ಕಳೆದುಕೊಂಡರು, ಅದರ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ, ಅದಕ್ಕೆ ಮಂತ್ರಿಗಳವರು ಪರಿಹಾರ ಧನವನ್ನು ಕೊಡುತ್ತೇನೆ, ಅದಕ್ಕೆ ಸಂಬಂಧಪಟ್ಟಂತೆ ಕಾನೂನಿಗೆ ತಿದ್ದುಪಡಿ ತಂದು ಕೊಡುತ್ತೇವೆಂದು ಹೇಳಿದ್ದರು. ಆದುದರಿಂದ ಸರ್ಕಾರದವರು ಅವಕ್ಕೆ ಏನಾದರೂ ತಿದ್ದುಪಡಿ ತಂದು ಪರಿಹಾರ ಧನವನ್ನು ಎಷ್ಟು ಜನರಿಗೆ ಕೊಟ್ಟಿದ್ದಾರೆ ? ಆ ಕುರಿ ಕಾಯುವವರು ಆ ಪರಿಹಾರ ಧನದಿಂದ ಅವರ ಜೀವನ ನೆಮ್ಮದಿಯಿಂದ ಇರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಾ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹೆಸರು ಘಟ್ಟ ಫಾರಂನಲ್ಲಿ ಬುಲ್‌ಗಳ ತಳಿ ಅಭಿವೃದ್ಧಿಗೋಸ್ಕರವಾಗಿ ಕೆ.ಡಿ.ಡಿ.ಸಿ.ಯವರು ಒಂದು ಯೋಜನೆ ಹಾಕಿಕೊಂಡಿದ್ದರು, ಅದು ಕಾರ್ಯಗತವಾಗಿದೆಯೋ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಚೀಫ್ ವಿಪ್‌ರವರು ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಡುತ್ತಿರುವಾಗ ಮಧ್ಯದಲ್ಲಿ ಅವರಿಗೆ ಇಂಟ್ರಪ್ಟ್ ಮಾಡಿ ಅವರ ಭಾಷಣ ನಿಲ್ಲಿಸಿ ಎಂದು ಹೇಳುತ್ತಿರುವುದು ಸರಿಯಲ್ಲ. ಆ ರೀತಿ ಮಾಡಕೂಡದು, ಅದು ಸರಿಯಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಮಂತ್ರಿಯವರು ಈ ಪಶುವೈದ್ಯ ಶಾಲೆಗಳನು ಕಳೆದ ೨ ವರ್ಷಗಳಿಂದ ಪ್ರಾರಂಭ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಒಂದನ್ನೂ ಕೂಡ ತೆರೆದ ಹಾಗೆ ಕಾಣುತ್ತಿಲ್ಲ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಕೊನೆಯದಾಗಿ ಅಡ್ವೊಕೇಟ್ಸ್‌ಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಅಡ್ವೊಕೇಟ್ ಬೆನ್ವಲೆಂಟ್ ಫಂಡಗೆ ಸಂಬಂಧಿಸಿದಂತೆ ಒಂದು ಬಿಲ್ ಇಂಟ್ರಡ್ಯೂಸ್ ಮಾಡಂತ್ತೇವೆಂದು ಕಳೆದ ಸಾರಿ ಆಶ್ವಾಸನೆ ಕೊಟ್ಟಿದ್ದರು, ಆ ಬಿಲ್ ಏನಾಯಿತು? ಅದನ್ನು ಈ ಸದನ ಮುಗಿಯುವುದರೊಳಗಾಗಿ ಇಂಟ್ರಡ್ಯೂಸ್ ಮಾಡುತ್ತೀರಾ ಎಂದು ಕೇಳುತ್ತೇನೆ. ಈ ಪಶುಗಳ ಆರೋಗ್ಯ ದೃಷ್ಟಿಯಿಂದ ವ್ಯಾಕ್ಸಿನ್‌ನನ್ನು ಸಕಾಲದಲ್ಲಿ ಒದಗಿಸುತ್ತೇವೆಂದು ಅವರು ಹೇಳಿ ಆದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ. ಮಾಯಣ್ಣ (ಹುಲಿಯೂರುದುರ್ಗ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನಾನು ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಸಾಮಾನ್ಯವಾಗಿ, ಪಶುಗಳು ನಮ್ಮ ಹಳ್ಳಿಯ ರೈತರ ಜೀವನಕ್ಕೆ ಬಹಳ ಉಪಯುಕ್ತವಾದ ಪ್ರಾಣಿಗಳು. ಈ ವಿಚಾರದಲ್ಲಿ ಸರ್ಕಾರ ಹೆಚ್ಚು ಆಸಕ್ತಿ ವಹಿಸಿ ಅವುಗಳ ಅಭಿವೃದ್ಧಿಗಾಗಿ ಹೆಚ್ಚೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುವುದಕ್ಕೆ ಇಷ ಪಡುತ್ತೇನೆ. ಜಾನುವಾರುಗಳನ್ನು ಅಭಿವೃದ್ಧಿ ಮಾಡದಿದ್ದರೆ ಈ ದೇಶದಲ್ಲಿ ರೈತರು ಕಷ್ಟಕ್ಕೆ ಗುರಿಯಾಗುತ್ತಾರೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ನಿಲುವನ್ನು ತೆಗೆದುಕೊಂಡು ವೈದ್ಯರ ಸಂಬಳ ಸಾರಿಗೆಗಳನ್ನು ಹೆಚ್ಚಿಸುವ ಮತ್ತು ವೈದ್ಯ ಇಲಾಖೆಯನ್ನು ಪುನರ್ ಸಂಘಟಿಸುವ ವಿಚಾರ ಮಾಡಿದ್ದಾರೆ. ಆ ದಿಸೆಯಲ್ಲಿ ಕಾರ್ಯ ನಿರ್ವಹಿಸಿದರೆ ನಿಜವಾಗಿಯೂ ಹಳ್ಳಿಗಾಡಿನ ಅಭಿವೃದ್ಧಿಯಾಗುತ್ತದೆಂದು ಹೇಳಲಿಚ್ಛಿಸುತ್ತೇನೆ. ಪಶು ಸಂಗೋಪನೆಯ ವಿಚಾರದಲ್ಲಿ ತಾವು ಕೆಲವು ಕಾರ್ಯಕ್ರಮಗಳನ್ನು ಏನು ಹಾಕಿಕೊಂಡಿದ್ದೀರಿ ಅವನ್ನು ಹಳ್ಳಿಗಾಡಿಗೆ ವಿಸ್ತರಿಸಬೇಕು. ದನಗಳನ್ನು ಸಾಕುವುದು, ಕೋಳಿಗಳನ್ನು, ಕುರಿಗಳನ್ನು, ಹಂದಿಗಳನ್ನು ಸಾಕುವುದು ಈ ಎಲ್ಲ ಕಾರ್ಯಕ್ರಮಗಳನ್ನು ಹಳ್ಳಿಗಳಿಗೆ ವಿಸ್ತರಿಸಬೇಕು. ಇದೊಂದು ಸಮಗ್ರವಾದ ಅಭಿವೃದ್ಧಿ ಯೋಜನೆ. ಈ ಯೋಜನೆಯನ್ನು ಕ್ಷಾಮ–ಬರಗಾಲ ನಿವಾರಣಾ ಯೋಜನೆಗಳಲ್ಲಿ ಅಳವಡಿಸಿಕೊಂಡರೆ ಒಳ್ಳೆಯದು. ಆಗ ಮತ್ತೊಂದು ರೀತಿಯ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಹಳ್ಳಿಗಾಡಿನ ಜನ ಬಹಳ ಬಡವರು; ಅವರಿಗೆ ವಸತಿ ಸೌಕರ್ಯ ಇರುವುದಿಲ್ಲ. ಮನೆಯಲ್ಲೇ ದನಗಳನ್ನು, ಪ್ರಾಣಿಗಳನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ, ದನಗಳ ಮತ್ತು ಕುರಿಗಳ ಕೊಟ್ಟಿಗೆಗಳನ್ನು ಕಟ್ಟಿಕೊಳ್ಳುವ ಸಲುವಾಗಿ ರೈತರಿಗೆ ಹೆಚ್ಚಿಗೆ ಹಣವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಈ ರೀತಿ ಮಾಡುವುದರಿಂದ ಆ ಪ್ರಾಣಿಗಳು ಕೂಡ ಒಳ್ಳೆಯ ವಾತಾವರಣದಲ್ಲಿ ಅಭಿವೃದ್ಧಿ ಹೊಂದಿ ಉತ್ತಮವಾದ ಹಾಲನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ ಹಳ್ಳಿಗಳಲ್ಲಿ ಕೆಲವು ಕಡೆ ಬಡಕಲಾದ, ವಯಸ್ಸಾದ ಪಶುಗಳನ್ನು ಇಟ್ಟುಕೊಂಡಿದ್ದು ಅವುಗಳಿಂದಲೇ ಹೊಲಗಳನ್ನು ಉಳಿಸಿಕೊಳ್ಳುತ್ತಿರುತ್ತಾರೆ ಆದ್ದರಿಂದ, ಅವರಿಗೆ ಒಳ್ಳೊಳ್ಳೆಯ ರಾಸುಗಳನ್ನು ಕೊಳ್ಳಲು ಸರ್ಕಾರದ ವತಿಯಿಂದಾಗಲೀ ಅಥವಾ ಬ್ಯಾಂಕುಗಳ ಮೂಲಕವಾಗಲೀ ಹಣ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿಗೂ ಇದುವರೆಗೆ ಡೈರಿ ಫಾರಂ ಬಂದಿಲ್ಲ; ಅದನ್ನು ಜಾಗ್ರತೆ ಮಾಡಬೇಕೆಂದು ಹೇಳಬಯಸುತ್ತೇನೆ. ಕೋಳಿ ಫಾರಂ ಮಾಡಿ ಉತ್ಪತ್ತಿಯಾದ ಮೊಟ್ಟೆಗಳನ್ನು ಮಾರಾಟ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ; ಅದಕ್ಕೆ ಒಂದು ಮಾರುಕಟ್ಟೆಯನ್ನು ರಚನೆ ಮಾಡಿ ಮೊಟ್ಟೆಗಳನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆ ಮಾಡಬೇಕು. ಅಲ್ಲದೆ ಹಸುಗಳಿಗೆ ಮತ್ತು ಕೋಳಿಗಳಿಗೆ ಮೇವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ. ಈ ಒಂದು ಕೆಲಸವನ್ನು ಯಾವುದಾದರೂ ಏಜೆನ್ಸಿಗಳಿಗೆ ವಹಿಸಿದರೆ ಪ್ರಯೋಜನವಿಲ್ಲ. ಸರ್ಕಾರವೇ ಪಶುಗಳಿಗೆ ಬೇಕಾದ ಮೇವನ್ನು ತಯಾರಿಸಿ ಹಾಲನ್ನು ಕೊಂಡುಕೊಳ್ಳುವುದಕ್ಕೆ ಹೋಗುವ ವ್ಯಾನಿನಲ್ಲಿ ಪ್ರತಿಯೊಂದು ಸಹಕಾರ ಸಂಘಗಳಿಗೆ ಕಳುಹಿಸಬೇಕು. ನಂತರ ಅವರು ಪಶುಗಳನ್ನು ಸಾಕಿರುವವರೆಲ್ಲರಿಗೂ ಅದನ್ನು ಸಮನಾಗಿ ಹಂಚತಕ್ಕ ವ್ಯವಸ್ಥೆ ಆಗಬೇಕು. ಈ ರೀತಿ ಮಾಡುವುದರಿಂದ ಹಳ್ಳಿಗಾಡಿನ ಜನರ ಮೇವನ್ನೊದಗಿಸುವ ಕಷ್ಟ ನಿವಾರಣೆಯಾಗುತ್ತದೆ. ಸರ್ಕಾರ ಬೆಳೆಯುತಕ್ಕ ಹುಲ್ಲು ಹಾಳಾಗದಂತೆ ಅದನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡತಕ್ಕ ಕಾರ್ಯಕ್ರಮವನ್ನು

ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಸಾಮಾನ್ಯವಾಗಿ, ಮಧುಗಿರಿಯಲ್ಲಿ ಕುರಿಗಳನ್ನು ಹೆಚ್ಚಾಗಿ ಸಾಕುತ್ತಾರೆ. ಆದರೆ ಕೊಟ್ಟಿಗೆ ಅನುಕೂಲತೆ ಇಲ್ಲದೆ ಇರುವವರು ಬೇಸಿಗೆ ಕಾಲದಲ್ಲಿ ಅಲ್ಲಿರದೆ ಒಂದು ಊರಿನಿಂದ ಇನ್ನೊಂದು ಊರಿಗೆ ವಲಸೆ ಹೋಗುತ್ತಾರೆ. ಅವರು ಯಾವ ಪ್ರದೇಶಕ್ಕೆ ಹೋಗುತ್ತಾರೋ ಅಲ್ಲಿ ಅರಣ್ಯ ಇಲಾಖೆಯವರು ಸಹಕರಿಸಿ ಅವರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಕೆಲವಾದರೂ ಕೊಟ್ಟಿಗೆಗಳನ್ನು ಇಟ್ಟುಕೊಂಡು ಯಾರು ಬಡವರಿದ್ದಾರೆ, ಹಿಂದುಳಿದ ವರ್ಗದವರಿದ್ದಾರೆ, ಹರಿಜನ-ಗಿರಿಜನರಿದ್ದಾರೆ ಅಂಥವರಿಗೆ ಕೊಡಬೇಕು ಮತ್ತು ಯಾರಿಗೆ ಜಾನುವಾರುಗಳನ್ನು ಸಾಕುವುದಕ್ಕೆ ಕಷ್ಟವಾಗಿರುತ್ತದೆ ಅಂಥವರಿಗೆ ಸಹಾಯ ಧನವನ್ನು ನೀಡಿ ಅವುಗಳನ್ನು ಬೆಳೆಸುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ಈ ರೀತಿ ಮಾಡುವುದರಿಂದ ಜಾನುವಾರುಗಳನ್ನು ಅಭಿವೃದ್ಧಿಗೊಳಿಸಲು ಸಹಾಯವಾಗುತ್ತದೆ. ಈ ಕೆಲಸವನ್ನು ತಪ್ಪದೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಬಡತನ ನಿವಾರಣೆಯಾಗಬೇಕೆಂದು ಹೇಳುತ್ತಾರೆ. ಆದರೆ ಅದು ಬರೀ ಜಮೀನು ಇಟ್ಟುಕೊಂಡು ಉಳುವುದರಿಂದ ನಿವಾರಣೆಯಾಗುವುದಿಲ್ಲ; ಜಾನುವಾರುಗಳನ್ನು ಹೆಚ್ಚಾಗಿ ಸಾಕುವುದರಿಂದ ಬಹುಮಟ್ಟಿಗೆ ನಿವಾರಣೆಯಾಗುತ್ತದೆಂದು ಹೇಳಬಹುದು. ಆದ್ದರಿಂದ, ಈ ದಿಸೆಯಲ್ಲಿ ಹೆಚ್ಚಾಗಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹಳ್ಳಿಗಾಡಿನಲ್ಲಿ ಬಡಕಟ್ಟಿನ ಜನರಿರುತ್ತಾರೆ; ಅವರಿಗೆ ವ್ಯವಸಾಯ ಮಾಡುವುದಕ್ಕೆ ಗೊತ್ತಿರುವುದಿಲ್ಲ. ಅಂಥವರಿಗೆ ಕುರಿ, ಮೇಕೆಗಳನ್ನು ಸಾಕಿಕೊಂಡು ಜೀವನ ಮಾಡುತ್ತಿರುತ್ತಾರೆ. ಅಂಥವರಿಗೂ ಕೂಡ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಹಳ್ಳಿಗಾಡಿನಲ್ಲಿರತಕ್ಕ ಜನರಿಗೆ ಜಾನುವಾರುಗಳನ್ನು, ಕುರಿ, ಕೋಳಿ, ಹಂದಿಗಳನ್ನು ಸಾಕುವುದಕ್ಕೆ ನವೀನ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಡಬೇಕು. ಆ ಜನಗಳಿಗೆ ಆ ವಿಷಯಗಳಲ್ಲಿ ತಿಳುವಳಿಕೆ ನೀಡಲು ಪಶು ಸಂಗೋಪನಾ ಇಲಾಖೆಯಲ್ಲಿ ಎಕ್ಸ್‌ಟೆನ್‌ಷನ್ ಅಧಿಕಾರಿಗಳು ಇರಬೇಕು. ಅವರು ಹಳ್ಳಿಗಳಿಗೆ ಹೋಗಿ ಅಲ್ಲಿನ ಜನಗಳಿಗೆ ತಿಳುವಳಿಕೆ ಬರುವಂತೆ ಹೇಳುವ ವ್ಯವಸ್ಥೆ ಆಗಬೇಕು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೂಡ ಎಕ್ಸ್‌ಟೆನ್‌ಷನ್ ಅಧಿಕಾರಿಗಳನ್ನು ತೆಗೆದುಕೊಂಡು ಕೆಲಸ ಮಾಡಬೇಕೆಂದು ಹೇಳುತ್ತೇವೆ. ಕೇಳಿದವರಿಗೆ ಬರೀ ಹಸುಗಳನ್ನು ಕೊಟ್ಟರೆ ಆಗುವುದಿಲ್ಲ; ಅವಕ್ಕೆ ಬೇಕಾದ ಮೇವನ್ನು ತಯಾರಿಸಿ ಒದಗಿಸತಕ್ಕದ್ದರಲ್ಲಿ ಕೂಡ ಜಾಗ್ರತೆ ವಹಿಸಬೇಕು. ಇವತ್ತಿನ ದಿವಸ, ಮೇವನ್ನು ಉತ್ಪತ್ತಿ ಮಾಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಅಷ್ಟಾಗಿ ಕಾಣುವುದಿಲ್ಲ. ಹಳ್ಳಿಗಾಡು ಪ್ರದೇಶಗಳಲ್ಲಿ ರೈತರಿಗೆ ಜಮೀನನ್ನು ಕೊಡಿಸಿ ಅಲ್ಲಿ ಬಾವಿಗಳನ್ನು ತೆಗೆಸಿ ಹುಲ್ಲನ್ನು ಬೆಳೆಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ನಿಮ್ಮ ಇಲಾಖೆಯಲ್ಲಿ ನೀವು ಕೆಲವೊಂದು ಗ್ರೇಡ್‌ಗಳನ್ನು ಮಾಡಿ ಅಸಿಸ್ಟೆಂಟ್ ಸರ್ಜನ್ ಮುಂತಾದವರಿಗೆ ಕೊಟ್ಟಿದ್ದೀರಿ. ಈ ರೀತಿ ಕೊಟ್ಟಿರುವುದರಿಂದ ಮೇಲಧಿಕಾರಿಗಳಿಗೆ ತೊಂದರೆಯಾಗಿದೆ. ಆದುದರಿಂದ, ಇದಕ್ಕೋಸ್ಕರ ಒಂದು ಸಮಿತಿಯನ್ನು ನೇಮಿಸಿ ಪೂರಾ ಇಲಾಖೆಯನ್ನೇ ಪುನರ್ ಸಂಘಟನೆ ಮಾಡಬೇಕೆಂದು ಹೇಳುತ್ತೇನೆ. ಡೈರೆಕ್ಟರಿಂದ ಹಿಡಿದು ಅಸಿಸ್ಟೆಂಟ್ ಡೈರೆಕ್ಟರ್‌ರವರೆಗೆ ಯಾವ ಯಾವ ರೀತಿ ಇರಬೇಕೆಂಬುದಕ್ಕೆ ಪುನರ್ ಸಂಘಟನೆ ಆದರೆ ಅನುಕೂಲವಾಗುತ್ತದೆ. ಈಗ ಕೆಲವೊಂದು ಕಡೆ ಸಂಚಾರಿ ಆಸ್ಪತ್ರೆಗಳಿವೆ. ಅದೇ ರೀತಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಸಂಚಾರಿ ಆಸ್ಪತ್ರೆಗಳನ್ನು ಮಾಡಿ ಅವರು ಪ್ರತಿಯೊಂದು ಹಳ್ಳಿಗಳಿಗೂ ಹೋಗಿ ಅಲ್ಲಿರತಕ್ಕ ಜಾನುವಾರುಗಳಿಗೆ ಏನೇನು ಕಾಯಿಲೆಗಳಿವೆ ಎಂಬುದನ್ನು ತಿಳಿದುಕೊಂಡು ಚಿಕಿತ್ಸೆ ನೀಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ, ಅನೇಕ ಆಸ್ಪತ್ರೆಗಳಲ್ಲಿ ಪ್ರಯೋಗಾಲಯಗಳಾಗಲೀ, ಔಷಧಿಗಳಾಗಲಿ ಇರುವುದಿಲ್ಲ. ಆ ಕಡೆ ಹೆಚ್ಚಿನ ಗಮನ ಕೊಟ್ಟು ಆ ಒಂದು ವ್ಯವಸ್ಥೆ ಎಲ್ಲ ಕಡೆಯೂ ಇರುವಂತೆ ಮಾಡಬೇಕು. ಎಮ್ಮೆ-ಹಸುಗಳು ಖಾಯಿಲೆ ಬಿದ್ದರೆ ವೈದ್ಯರು ಅವು ಇರುವ ಸ್ಥಳಕ್ಕೇ ಬಂದು ನೋಡುವಂಥ ವ್ಯವಸ್ಥೆ ಮಾಡಬೇಕು. ಇವತ್ತಿನ ದಿವಸ, ಬಹು ಭಾಗಗಳಲ್ಲಿ ಆಸ್ಪತ್ರೆಗಳಿಗೆ ಕಟ್ಟಡಗಳು ಇರುವುದಿಲ್ಲ; ಕೆಲವು ಕಡೆ ಹಳೇ ಕಟ್ಟಡಗಳಿರುತ್ತವೆ. ಉದಾಹರಣೆಗೆ, ಮಲ್ಲೇಶ್ವರದ ಆಸ್ಪತ್ರೆಯನ್ನು ನೋಡಿದರೆ ಗೊತ್ತಾಗುತ್ತದೆ; ಅದು ಎಷ್ಟೋ ವರ್ಷಗಳ ಹಿಂದೆ ಕಟ್ಟಿದಂತಹ ಕಟ್ಟಡ. ಆದ್ದರಿಂದ, ಈ ಒಂದು ಬಾಬಿಗಾಗಿ ಹೆಚ್ಚು ಹಣವನ್ನು ಒದಗಿಸಿ ಎಲ್ಲ ಕಡೆಯೂ ಕಟ್ಟಡಗಳನ್ನು ಕಟ್ಟಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹಳ್ಳಿಗಾಡು ಪ್ರದೇಶಗಳಲ್ಲಿ ವೈದ್ಯರನ್ನು ನೇಮಿಸುತ್ತೀರಿ; ಆದರೆ ಅವರಿಗೆ ಸರಿಯಾದ ವಸತಿ ಸೌಕರ್ಯ ಅಲ್ಲಿ ಇರುವುದಿಲ್ಲ. ಅಂಥ ಕಡೆ ವಸತಿ ಸೌಕರ್ಯ ಒದಗಿಸಿಕೊಡಬೇಕು ಮತ್ತು ಆಸ್ಪತ್ರೆ ಕೂಡ ಅನುಕೂಲಕರವಾಗಿರಬೇಕು. ಮುಖ್ಯವಾಗಿ ಇವೆರಡನ್ನು ಮಾಡದಿದ್ದರೆ ವೈದ್ಯರಿದ್ದರೂ ಏನೂ ಪ್ರಯೋಜನವಾಗುವುದಿಲ್ಲ. ಉದಾಹರಣೆಗೆ ನಮ್ಮ ಹುಲಿಯೂರು ದುರ್ಗದಲ್ಲಿ ಒಂದು ಆಸ್ಪತ್ರೆ ಇದೆ; ಅದನ್ನು ಯಾವುದೋ ಒಂದು ಶಾಲಾ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ತಮ್ಮ ಹತ್ತಿರ ಬಂದರೆ

ಆಸ್ಪತ್ರೆಗೆ ದುಡ್ಡು ಕೊಡುವುದಕ್ಕಾಗುವುದಿಲ್ಲ; ಧನವಂತರಿಂದ ವಂತಿಗೆ ಕೂಡಿಸಿ ಕಟ್ಟಡ ಕಟ್ಟಿಸಿ ಎಂದು ಹೇಳುತ್ತೀರಿ. ಆದರೆ ಇವತ್ತಿನ ದಿವಸ ಆ ರೀತಿ ಧನ ಸಹಾಯ ನೀಡತಕ್ಕ ಪದ್ಧತಿ ಹೊರಟು ಹೋಗಿದೆ. ಈ ದಿಸೆಯಲ್ಲಿ ಹಳ್ಳಿಯ ಜನರಿಗೆ ಅನುಕೂಲ ಮಾಡಿಕೊಟ್ಟರೆ ಅವರು ಬದುಕುವುದಕ್ಕೆ ಅನುಕೂಲವಾಗುತ್ತದೆ. ಹಳ್ಳಿಗಳಲ್ಲಿ ಆಸ್ಪತ್ರೆಗಳಿದ್ದರೆ ಕಟ್ಟಡಗಳಿರುವುದಿಲ್ಲ. ಅದ್ದರಿಂದ, ಈ ಕಟ್ಟಡಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ)—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾನೂನು ಮತ್ತು ಪಶುಸಂಗೋಪನಾ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕ ೨೩½ ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಈ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮೊಟ್ಟಮೊದಲನೆಯದಾಗಿ ಕಾನೂನಿನ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು ೩೫ ವರ್ಷಗಳಾಗಿದ್ದರೂ ಕೂಡ ಇನ್ನೂ ಬ್ರಿಟಿಷರು ಹಾಕಿಕೊಟ್ಟ ಮಾರ್ಗದಲ್ಲಿಯೇ ನಾವು ಹೋಗುತ್ತಿದ್ದೇವೆ. ಇದು ಭಾರತೀಯ ಸಂಪ್ರದಾಯಕ್ಕೆ ಸರಿಯಾದುದಲ್ಲ ಮತ್ತು ಒಂದು ರೀತಿಯಲ್ಲಿ ಒಳ್ಳೆಯ ಸೂಚನೆಯಲ್ಲ ಎಂದು ನನ್ನ ವೈಯಕ್ತಿಕವಾದ ಅಭಿಪ್ರಾಯ. ನಮಗೆ ನೇರವಾಗಿ ನ್ಯಾಯ ಸಿಗುವಂಥ ಅವಕಾಶ ಇರಬೇಕು. ಹಿಂದೆ ನಮ್ಮ ರಾಷ್ಟ್ರದಲ್ಲಿ ಅಶೋಕ ಮಹಾನ್ ಚಕ್ರವರ್ತಿಯಾಗಿದ್ದ. ಕನ್ನಡ ನಾಡಿನಲ್ಲಿ ನೃಪತುಂಗ ಮಹಾನ್ ಚಕ್ರವರ್ತಿಯಾಗಿದ್ದ. ಅವನು ನೀಡುತ್ತಿದ್ದ ನ್ಯಾಯ ನಮಗೆ ಈಗ ದೊರೆಯಬೇಕು. ಅವನು ಅನುಸರಿಸುತ್ತಿದ್ದ ನಿಷ್ಪಕ್ಷಪಾತ ಧೋರಣೆ ನಮ್ಮಲ್ಲಿ ಬರಬೇಕು. ಒಂದುಸಾರಿ ನೃಪತುಂಗ ಆತನ ಮಗ ತಪ್ಪು ಮಾಡಿದಾಗ ಕೂಡ ಆತನನ್ನು ಶಿಕ್ಷೆಗೊಳಪಡಿಸುತ್ತಾನೆ. ಅಂಥ ಕಾನೂನು ನಮಗೆ ಬೇಕು. ಸಮಾಜ ಬದಲಾವಣೆಯಾದಂತೆ ಕಾನೂನಿನ ಪದ್ಧತಿಯನ್ನೂ ಬದಲಾವಣೆ ಮಾಡಬೇಕು. ಸಾಮಾನ್ಯ ಜನರಿಗೆ, ದುರ್ಬಲರಿಗೆ ಬಡವರಿಗೆ ಸಾಮಾಜಿಕ ನ್ಯಾಯ ದೊರೆಯಬೇಕು. ದುರಾದೃಷ್ಟವಶಾತ್ ನಮಗೆ ಈಗ ಈ ಸಾಮಾಜಿಕ ನ್ಯಾಯ ದೊರೆಯುತ್ತಿಲ್ಲ. ಭೂ ನ್ಯಾಯಮಂಡಲಿಗಳಲ್ಲಿ ಇವತ್ತಿನ ದಿವಸ ಏನಾಗುತ್ತಿದೆ ಮತ್ತು ಅಲ್ಲಿ ತೀರ್ಮಾನವಾದ ಕೇಸುಗಳು ಹೈಕೋರ್ಟಿಗೆ ಬಂದಾಗ ಏನಾಗುತ್ತಿದೆ ಎಂಬುದನ್ನು ಮಾನ್ಯ ಬಸವಲಿಂಗಪ್ಪನವರು ಚೆನ್ನಾಗಿ ಹೇಳಿದ್ದಾರೆ. ನಾನು ಅದರ ಅನಂತ ಮುಖವನ್ನು ತೋರಿಸುವುದಕ್ಕೆ ಇಷ್ಟಪಡುತ್ತೇನೆ ಈಗ ನಾನು ಸದಸ್ಯನಾಗಿ ನಾಲ್ಕೂವರೆ ವರ್ಷವಾಗಿದೆ. ಫೆಬ್ರುವರಿ ೨೬ನೇ ತಾರೀಖು ಬಂದರೆ ನಾನು ಸದಸ್ಯನಾಗಿ ಐದು ವರ್ಷವಾಗುತ್ತದೆ ನಾನು ಸದಸ್ಯನಾಗುವ ಮುಂಚೆ ನನ್ನ ಕ್ಷೇತ್ರದಲ್ಲಿ ಭೂ ಸ್ವಾಧೀನ ಪ್ರಕರಣಗಳು ನಡೆದು ದಲಿತರಿಗೆ. ಬಡವರಿಗೆ ನಿರ್ಗತಿಕರಿಗೆ ಸೈಟು ಕೊಡತಕ್ಕ ಭೂ ವಿವಾದದಲ್ಲಿ ೪೨ ಹಳ್ಳಿಗಳಿಗೆ ಸಂಬಂಧಿಸಿದಂತೆ ಹೈಕೋರ್ಟಿನಿಂದ ತಡೆಯಾಜ್ಞೆ ಬಂದಿತ್ತು. ನಾಲ್ಕೂವರೆ ವರ್ಷಗಳಾಗಿದ್ದರೂ ಕೂಡ ೪೨ ಪ್ರಕರಣಗಳಲ್ಲಿ ಒಂದರಲ್ಲೂ ತಡೆಯಾಜ್ಞೆ ತೆಗೆದು ಹಾಕುವುದಕ್ಕೆ ಆಗಿಲ್ಲ. ಇದಕ್ಕೆ ಕಾರಣ ಏನು ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕಾನೂನು ಸಚಿವರು ಈ ತರಹ ವಿಚಾರದಲ್ಲಿ ಹೆಚ್ಚಿನ ಕಳಕಳಿಯನ್ನು ಹೊಂದಿರತಕ್ಕ ಪ್ರಾಮಾಣಿಕ ವ್ಯಕ್ತಿಯಾಗಿದ್ದಾರೆ. ಇವರು ಇದರ ಒಳಹೊಕ್ಕು ನೋಡಬೇಕು. ಇವರು ಸಾಮಾನ್ಯ ಜನರಿಗೆ, ಬಡವರಿಗೆ ಸಾಮಾಜಿಕ ನ್ಯಾಯ ದೊರಕಿಸತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ೪೨ ಹಳ್ಳಿಗಳಲ್ಲಿ ಭೂಮಿಗೆ ಸಂಬಂಧಿಸಿದಂತೆ ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಿದ್ದರೆ ೪೨೦೦ ಜನ ಬಡವರಿಗೆ ಸೈಟುಗಳನ್ನು ಕೊಡಬಹುದಾಗಿತ್ತು. ಇದರಿಂದಾಗಿ ೪೨೦೦ ಜನರಿಗೆ ಅನ್ಯಾಯ ಮಾಡಿದಂತಾಗಿದೆ. ಈ ಸಮಸ್ಯೆಯನ್ನು ನೋಡತಕ್ಕ ದೃಷ್ಟಿಕೋನ ಎಲ್ಲಿಯವರೆಗೆ ಬದಲಾವಣೆಯಾಗುವುದಿಲ್ಲವೋ ಅಲ್ಲಿಯವರೆಗೆ ನಮಗೆ ಸಾಮಾಜಿಕ ನ್ಯಾಯ ದೊರೆಯುವುದಿಲ್ಲ, ಸರಿಸಮಾನತೆ ಎಂಬುದನ್ನು ಕಾಣಲಾಗುವುದಿಲ್ಲ. ಇವತ್ತು ಕಾನೂನು ನೆರವು ಮಂಡಳಿಯನ್ನು ರಚಿಸಿದ್ದಾರೆ. ಇದು ಸ್ವಾಗತಾರ್ಹವಾದ ನಿಲುವು. ಅದಕ್ಕೆ ಬಂದಿರತಕ್ಕ ಅರ್ಜಿಗಳು ೫೪೪೨. ಅದರಲ್ಲಿ ಕೇವಲ ೪೧೨ ಮೊಕದ್ದಮೆಗಳ ಬಗ್ಗೆ ಮಾತ್ರ ತೀರ್ಮಾನ ಕೊಟ್ಟಿದ್ದಾರೆ. ಹಾಗಾದರೆ ಇನ್ನೂ ೫ ಸಹಸ್ರಕ್ಕಿಂತ ಹೆಚ್ಚಾಗಿರುವ ಮೊಕದ್ದಮೆಗಳ ಗತಿ ಏನು ಎಂಬುದನ್ನು ಪ್ರಶ್ನೆ ಮಾಡುತ್ತೇನೆ. ಕೋರ್ಟಿನಲ್ಲಿ ಇತ್ಯರ್ಥವಾಗದೆ ಉಳಿದಿರತಕ್ಕ ಮೊಕದ್ದಮೆಗಳನ್ನು ತೀರ್ಮಾನ ಮಾಡಲು ವಿಶೇಷ ವ್ಯವಸ್ಥೆ ಮಾಡಬೇಕು. ಇಲ್ಲದೇಹೋದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ವಿಶೇಷವಾಗಿ ಒಂದು ಬೆಂಚ್ ರಚಿಸಿ ಅವುಗಳ ಮುಂದೆ ಈ ಮೊಕದ್ದಮೆಗಳನ್ನು ತಂದು ನಿರ್ದಿಷ್ಟ ಕಾಲದಲ್ಲಿ ಇದನ್ನು ಇತ್ಯರ್ಥಪಡಿಸುವಂತೆ ನಿರ್ದಿಷ್ಟ ಸೂಚನೆಯನ್ನು ನೀಡಿದರೆ ನಾವೇನಾದರೂ ಸಾಮಾಜಿಕ ನ್ಯಾಯ

ದೊರಕಿಸಬಹುದು. ಮತ್ತು ಇದರಿಂದ ಬಡವರಿಗೆ ಅನುಕೂಲವಾಗಬಹುದು. ಇಲ್ಲದಿದ್ದರೆ ವರ್ಷಗಳುರುಳುತ್ತಿದ್ದರೂ ಸಾಮಾನ್ಯ ಜನರಿಗೆ ನ್ಯಾಯ ದೊರೆಯುವುದಿಲ್ಲ. ಕಾನೂನು ನೆರವು ಮಂಡಲಿಯಲ್ಲಿ ತಾವು ನೇಮಿಸತಕ್ಕ ವಕೀಲರು ಸತ್ಯನಿಷ್ಠರಾಗಿರಬೇಕು, ಕಾರ್ಯನಿಷ್ಠರಾಗಿರಬೇಕು. ಅಂಥ ವ್ಯಕ್ತಿಗಳನ್ನು ಹಾಕಿದರೆ ಮಾತ್ರ ಒಳ್ಳೆಯ ಫಲ ಸಿಗುತ್ತದೆಂಬುದು ನನ್ನ ಅಭಿಪ್ರಾಯ.

ಇನ್ನು ಎರಡನೆಯದಾಗಿ ನಮ್ಮ ವಿಧಾನ ಮಂಡಲದ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ವಿಧಾನ ಮಂಡಲದ ವರದಿಗಾರರು ನಾವು ಹೇಳುವುದನ್ನು ವರದಿ ಮಾಡುತ್ತಾರೆ. ಅವರು ವರದಿಗಾರರಾಗಿ ಸೇರಿದರೆ ವರದಿಗಾರರಾಗಿಯೇ ನಿವೃತ್ತರಾಗುತ್ತಾರೆ. ಈ ಮಧ್ಯೆ ಅವರಿಗೆ ಯಾವ ವಿಧವಾದ ಬಡ್ತಿ ಇಲ್ಲ, ಯಾವ ವಿಧವಾದ ವೇತನ ಹೆಚ್ಚಳ ಇಲ್ಲ. ಬೇರೆ ರಾಜ್ಯಗಳಲ್ಲಿ ವರದಿಗಾರರನ್ನು ಮೊದಲನೇ ದರ್ಜೆ ಅಧಿಕಾರಿಗಳೆಂದು ಮಾಡಿದ್ದಾರೆ. ತಮಿಳುನಾಡು, ಮಹಾರಾಷ್ಟ್ರ, ಹರಿಯಾಣ, ಅಸ್ಸಾಂ, ಬಿಹಾರ, ಆಂಧ್ರಪ್ರದೇಶ ಇನ್ನೂ ಮುಂತಾದ ರಾಜ್ಯಗಳಲ್ಲಿ ವರದಿಗಾರರಿಗೆ ಪ್ರಥಮದರ್ಜೆ ಅಧಿಕಾರಿಗಳು ಎಂಬ ಫಲಕ ಕೊಟ್ಟಿದ್ದಾರೆ. ಅದೇರೀತಿ ಇಲ್ಲಿನ ವರದಿಗಾರರಿಗೆ ತಾವು ಕೊಡಬೇಕು. ಹೋದಸಾರಿ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಆಶ್ವಾಸನೆ ಬರೀ ಆಶ್ವಾಸನೆ ರೂಪದಲ್ಲೇ ಉಳಿದಿದೆಯೇ ವಿನಹಾ ಅದು ಕಾರ್ಯರೂಪಕ್ಕೆ ಬಂದಿಲ್ಲ ಆದ್ದರಿಂದ ಅದನ್ನು ಅವರು ಈ ಕೂಡಲೇ ಕಾರ್ಯರೂಪಕ್ಕೆ ತರಬೇಕು ಎಂದು ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ ಪಶುಸಂಗೋಪನೆ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೂಕ ಪ್ರಾಣಿಗಳ ಯೋಗಕ್ಷೇಮವನ್ನು ನೋಡಿಕೊಳ್ಳತಕ್ಕ ಪವಿತ್ರ ಹೊಣೆ ಈ ಇಲಾಖೆಯನ್ನು ಹೊತ್ತಿರತಕ್ಕ ಮಾನ್ಯ ಕಾನೂನು ಮತ್ತು ಪಶುಸಂಗೋಪನಾ ಮಂತ್ರಿಗಳ ಮೇಲೆ ಬಿದ್ದಿದೆ. ನನಗೆ ಜ್ವರ ಬಂದರೆ ನಾನು ನೇರವಾಗಿ ವೈದ್ಯರ ಹತ್ತಿರ ಹೋಗಿ ನನ್ನ ಕಷ್ಟವನ್ನು ಹೇಳಿಕೊಳ್ಳಬಲ್ಲೆ. ಅವರು ಅನಾಸಿನ್ನೋ, ಆಸ್ಪ್ರೋನೋ ನುಂಗು ಎಂದು ಕೊಡುತ್ತಾರೆ. ಆದರೆ ಮೂಕಪ್ರಾಣಿಗಳಿಗೆ ಏನಾದರೂ ಖಾಯಿಲೆ ಬಂದರೆ ಅವು ಬಾಯಿಬಿಟ್ಟು ಹೇಳುವ ಸ್ಥಿತಿಯಲ್ಲಿರುವುದಿಲ್ಲ. ಆದ್ದರಿಂದ ಅದನ್ನು ಪರೀಕ್ಷೆ ಮಾಡತಕ್ಕ ವೈದ್ಯರು ಮಾನವ ವೈದ್ಯರಿಗಿಂತ ಬುದ್ಧಿವಂತರಾಗಿರಬೇಕು. ಆದ್ದರಿಂದ ಪಶುವೈದ್ಯರ ಬಗ್ಗೆ ಹೆಚ್ಚಿನ ಅನುಕಂಪ ಇರಬೇಕು. ಇದನ್ನು ತಾವು ಕಾರ್ಯತಃ ಮಾಡಿ ತೋರಿಸಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪಶುವಿಗೆ ಜ್ವರ ಬಂದರೆ, ಚಪ್ಪೆ ರೋಗ ಬಂದರೆ ನನಗೆ ಇಂಜಕ್ಷನ್ ಚುಚ್ಚು ಎಂದು ಅದು ಬಂದು ಹೇಳುವುದಿಲ್ಲ. ಆದರೆ ಕೆಲವು ಸಂಕೇತಗಳಿಂದ ಅದರ ಖಾಯಿಲೆಯನ್ನು ಕಂಡುಹಿಡಿದು ವೈದ್ಯ ಔಷಧಿ ಕೊಡುತ್ತಾನೆ. ಆದ್ದರಿಂದ ಮಾನವ ವೈದ್ಯರಿಗಿಂತ ಪಶುವೈದ್ಯರ ಕರ್ತವ್ಯ ಶ್ರೇಷ್ಠವಾದುದು. ಮಾನವ ವೈದ್ಯರಿಗಿಂತ ಪಶುವೈದ್ಯರಿಗೆ ಕಡಿಮೆ ಸಂಬಳ ಇದ್ದುದರಿಂದ ಅವರಿಗೆ ಸಮನಾಗಿ ವೇತನವನ್ನು ಹೆಚ್ಚಿಸಿ ಎಂದು ಪಶುವೈದ್ಯರು ವಿಧಾನಸೌಧದ ಮುಂದೆ ಸತ್ಯಾಗ್ರಹ ಮಾಡುತ್ತಿದ್ದರು ಆದರೆ ಮಾನ್ಯ ಮಂತ್ರಿಗಳು ಅವರ ಪವಿತ್ರವಾದ ಕೆಲಸವನ್ನು ಅರಿತು ಪಶುವೈದ್ಯರ ಸಂಬಳವನ್ನು ಹೆಚ್ಚಿಸಿ ಮಾನವ ವೈದ್ಯರಿಗೂ ಮತ್ತು ಪಶುವೈದ್ಯರಿಗೂ ಇರತಕ್ಕ ಅಂತರವನ್ನು ತಪ್ಪಿಸಿದ್ದೀರಿ. ಅವರ ವೇತನಗಳನ್ನು ಸಮಸ್ಥಿತಿಯಲ್ಲಿ ತಂದಿದ್ದೀರಿ. ಆದ್ದರಿಂದ ತಮಗೆ, ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರಿಗೆ ಹಾಗೂ ಇದಕ್ಕೆ ಒಪ್ಪಿಗೆ ಕೊಟ್ಟ ವೀರಪ್ಪ ಮೊಯಿಲಿಯವರಿಗೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ರಾಜ್ಯದಲ್ಲಿ ೧೩೬೫ ಪಶುವೈದ್ಯಶಾಲೆಗಳಿವೆ. ೧೯೭೮ ರಿಂದ ಈ ವೈದ್ಯಾಲಯಗಳ ಸಂಖ್ಯೆ ಹೆಚ್ಚಾಗಿಲ್ಲ. ಆದರೆ ಮಾನವನಿಗೆ ಬೇಕಾದ ಆಸ್ಪತ್ರೆಗಳ ಸಂಖ್ಯೆಯನ್ನು ಮಾತ್ರ ಹೆಚ್ಚಿಸಿದ್ದಾರೆ ದಯಮಾಡಿ ಈ ಪಶುವೈದ್ಯ ಶಾಲೆಗಳ ಸಂಖ್ಯೆಯನ್ನೂ ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ೧೩೬೫ ಇರುವ ಪಶುವೈದ್ಯ ಶಾಲೆಗಳ ಸಂಖ್ಯೆಯನ್ನು ೨,೦೦೦ಕ್ಕೆ ಹೆಚ್ಚಿಸಿದರೆ ಒಳ್ಳೆಯದು. ಈ ರೀತಿ ಮಾಡಿದರೆ ಮೂಕ ಪಶುಗಳ ಯೋಗಕ್ಷೇಮವನ್ನು ದಕ್ಷರೀತಿಯಲ್ಲಿ ನೋಡಿಕೊಂಡ ಕೀರ್ತಿ ನಿಮಗೆ ಬರುತ್ತದೆಂಬುದು ನನ್ನ ಅಭಿಪ್ರಾಯ.

೬–೦೦ ಪಿ.ಎಂ.

ಇನ್ನು ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಕ್ಷೀರ ಕ್ರಾಂತಿಯಾಗಬೇಕಾಗಿದೆ. ಆರ್ಥಿಕ ಕ್ರಾಂತಿಗೆ ಕ್ಷೀರ ಕ್ರಾಂತಿಯೇ ಪೂರಕ. ಈ ಒಂದು ದಿಕ್ಕಿನಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೊಸೈಟಿಗಳ ಮುಖಾಂತರ ಪಶುಗಳನ್ನು ಕೊಳ್ಳುವುದಕ್ಕೆ ಹಣವನ್ನು

ಕೊಟ್ಟಿದ್ದೀರಿ. ಸಬ್ಸಿಡಿ ಕೊಟ್ಟಿದ್ದೀರಿ. ತಾವೂ ಇನ್ನೂ ಹೆಚ್ಚು ಹಣವನ್ನು ಈ ಬಾಬಿಗೆ ಒದಗಿಸಿ ಅವರಿಗೆ ಇನ್ನೂ ಹೆಚ್ಚಿನ ಸಹಾಯವನ್ನು ಮಾಡಿ ಅವರ ಬಡತನವನ್ನು ದೂರ ಮಾಡಬೇಕೆಂದು ಈ ಮೂಲಕ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಲಿ ಎಂದು ಮಾಡಿದ್ದೀರಿ. ದುರಾದೃಷ್ಟವಶಾತ್ ೧೯೭೪ರಲ್ಲಿ ಈ ಮಂಡಲಿ ಪ್ರಾರಂಭವಾಗಿದ್ದರೂ ಸಹಾ ಇಲ್ಲಿಯವರೆಗೆ ಯಾವುದೇ ಒಂದು ಒಳ್ಳೆಯ ಕೆಲಸ ಇದರಿಂದ ಆಗಿಲ್ಲ. ಏಕೆಂದರೆ ಇದಕ್ಕೆ ಕೊಡುವ ೧೨ ಲಕ್ಷ ರೂಪಾಯಿಗಳ ಹಣ ಅಲ್ಲಿಯ ಸಿಬ್ಬಂಧಿ ಸಂಬಳ, ವಾಹನಗಳ ಉಸ್ತುವಾರಿ, ಡೀಸೆಲ್, ವಾಹನಸದ ರಿಪೇರಿಗೇ ಖರ್ಚಾಗುವುದರಿಂದ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಆಗುತ್ತಾ ಇಲ್ಲ. ಆದ್ದರಿಂದ ನಾವು ಈಗ ಉಣ್ಣೆಯನ್ನು ಜಾಸ್ತಿ ಉತ್ಪಾದಿಸಬೇಕಾಗಿದೆ. ಹಾಗೂ ಮಾಂಸದ ಉತ್ಪಾದನೆಯನ್ನೂ ಜಾಸ್ತಿ ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಬನ್ನೂರು ಕುರಿಗಳ ಮಾಂಸ ಇಡೀ ಪ್ರಪಂಚದಲ್ಲಿಯೇ ಅತ್ಯಂತ ರುಚಿಕರವಾದ ಮಾಂಸ. ಆಸ್ಟ್ರೇಲಿಯಾಗೆ ಹೋಗಿ, ಯೂರೋಪ್‌ಗೆ ಹೋಗಿ, ಎಲ್ಲಿ ಹೋದರೂ ಬನ್ನೂರು ಕುರಿಯಷ್ಟು ರುಚಿಕರವಾದ ಮಾಂಸ ಸಿಗಂವುದಿಲ್ಲ. ಆದುದರಿಂದ ಈ ಕುರಿ ಸಂಪತ್ತು ಜಾಸ್ತಿಯಾಗಬೇಕು. ಡೆಕ್ಕನ್ ಹಾಗೂ ಬಳ್ಳಾರಿಯ ಉಣ್ಣೆ ಬಹಳ ಒಳ್ಳೆಯದಿದೆ. ಇದನ್ನು ಅಭಿವೃದ್ಧಿಪಡಿಸಿದರೆ ಈ ಒಂದು ಕಸುಬನ್ನೇ ನಂಬಿರುವ ಜನಾಂಗಕ್ಕೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಮಾಡಿರುವ ಉಣ್ಣೆ ಬೋರ್ಡ್ ಬರೀ ಬೋರ್ಡಾಗಿ ಉಳಿಯದೇ ತನ್ನದೇ ಆದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈ ಕಸುಬಿನಲ್ಲಿ ನಂಬಿರುವ ಬಡವರ ಅಭಿವೃದ್ಧಿ ಕಡೆಗೆ ಈ ಮಂಡಲಿ ಗಮನ ಹರಿಸಬೇಕು.

ಇನ್ನು ನಮ್ಮ ಎಲ್ಲಾ ರೈತರು ಟ್ರಾಕ್ಟರ್‌ಗಳನ್ನು, ಆಧುನಿಕ ಉಪಕರಣಗಳನ್ನು ಕೊಂಡು ಕೊಳ್ಳು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಹೆಚ್ಚು ಹೆಚ್ಚು ವ್ಯವಸಾಯಕ್ಕೆ ಉಪಯೋಗವಾಗತಕ್ಕ ಹಳ್ಳೀಕಾರ ಮತ್ತು ಅಮೃತಮಹಲ್ ತಳಿಗಳನ್ನು ಹೆಚ್ಚು ಮಾಡಬೇಕು. ಈ ತಳಿಗಳು ನಾಶವಾದರೆ ನಮ್ಮ ರೈತ ನಾಶವಾದಂತೆಯೇ ಸರಿ. ಆದ್ದರಿಂದ ಈ ತಳಿಗಳ ಅಭಿವೃದ್ಧಿ ಕಡೆ ಸರ್ಕಾರ ಹೆಚ್ಚು ಗಮನ ಹರಿಸಬೇಕೆಂದು ಕೇಳಿಗೂಳ್ಳುತ್ತೇನೆ.

ಇನ್ನು ಕೋಳಿ ಸಾಕಾಣಿಕೆ ಒಂದು ಲಾಭದಾಯಕ ಉದ್ಯಮ ಎಂದು ಜನ ತಿಳಿದಿದ್ದಾರೆ. ಆದರೆ ಆ ಬಗ್ಗೆ ಸಾಕಾಣಿಕೆಗಾರರಿಗೆ ಕೇಳಲಾಗಿ, ಅವರು ಈ ಸಾಕಾಣಿಕೆಯನ್ನು ಮುಚ್ಚಬೇಕೆಂದು ಇದ್ದೇವೆಂದು ಹೇಳುತ್ತಾರೆ. ಕಾರಣ, ಈ ದಿನ ನಾವು ಹೋಟೆಲ್‌ನಲ್ಲಿ ೧ ಮೊಟ್ಟೆ ಕೊಂಡರೆ ಒಂದು ರೂಪಾಯಿ ಕೊಡುತ್ತೇವೆ. ಆದರೆ, ರೈತರಿಂದ ಹಾಗೂ ಮೊಟ್ಟೆ ಸಾಕಾಣಿಕೆಗಾರರಿಂದ ಮೊಟ್ಟೆ ಕೊಂಡುಕೊಳ್ಳುವವರು ಕೊಡುವುದು ಕೇವಲ ೪೨ ಪೈಸೆ. ಎಂದರೆ ೫೮ ಪೈಸೆಗಳ ಲಾಭ ಬರೀ ದಳ್ಳಾಳಿಗಳಿಗೆ ಹೋಗುತ್ತಿದೆ. ಈ ಅಸಮತೆಯನ್ನು ತಪ್ಪಿಸಲು, ಕೋಳಿ ಸಾಕಾಣಿಕೆಕಾರರಿಗೆ ಒಳ್ಳೆಯ ಸಹಾಯ ಮಾಡಲು ಒಂದು ಎಗ್ ಬೋರ್ಡ್ ಸ್ಥಾಪನೆ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನೂ ಮಾತನಾಡಲು ಅನೇಕ ವಿಷಯಗಳು ಇದ್ದವು. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ಸನ್ಮಾನ್ಯ ರಾಮಕೃಷ್ಣ ಅವರು ಮುಂದಿನ ಬಜೆಟ್ಟನ್ನು ಮಂಡಿಸುವಾಗ ಕ್ರಾಂತಿಕಾರಕವಾದ ರೀತಿಯಲ್ಲಿ ಅಭಿವೃದ್ಧಿಯನ್ನು ತರಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ)—ಅಧ್ಯಕ್ಷರೇ. ಮಾನ್ಯ ಕಾನೂನು ಮಂತ್ರಿಗಳು ತಂದಿರತಕ್ಕ ಬೇಡಿಕೆಗಳ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಕಾಮನ್ ವೆಲ್ತ್ ಪಾರ್ಲಿಮೆಂಟರಿ ಕಾನ್ಫರೆನ್ಸ್ ನಡೆಯುತ್ತದೆ. ಸದಸ್ಯರಾದ ನಾವು ೫ ರೂಪಾಯಿಗಳ ಚಂದಾ ಕೊಡುತ್ತೇವೆ. ವರ್ಷಕ್ಕೊಂದೆರಡು ಬಾರಿ ಸೇರುತ್ತೇವೆ. ಬಿಸ್ಕತ್ತು, ಕಾಫಿ ಸಂತರ್ಪಣೆಯಾದ ಮೇಲೆ ಆ ಸಭೆ ಮುಗಿಯುತ್ತದೆ. ಇದರಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ತಮಿಳುನಾಡಿನಲ್ಲಿ ಸದಸ್ಯರನ್ನು ತಿಂಗಳಿಗೊಮ್ಮೆ ಕಾಮನ್ ವೆಲ್ತ್ ಕಂಟ್ರೀಸ್‌ಗೆ ಕಳುಹಿಸುವ ಬಗ್ಗೆ ಜಾರಿಗೆ ತಂದಿರುವುದನ್ನು ಇತ್ತೀಚೆಗೆ ಪತ್ರಿಕೆಗಳಲ್ಲಿ ಓದಿದೆ. ಇತ್ತೀಚೆಗೆ ೨೦ ಜನ ಅಲ್ಲಿನ ಶಾಸಕರು ಹಾಂಕಾಂಗ್‌ಗೆ ಹೋಗಿದ್ದರು. ಈ ವಿಷಯ ಮಾನ್ಯ ರಾಮಕೃಷ್ಣ ಅವರಿಗೆ ಗೊತ್ತಿದೆ. ಈ ಸ್ಟಡೀಸ್‌ಗೆ ಹೋಗುವುದಕ್ಕೆ ರಿಸರ್ವ್ ಬ್ಯಾಂಕ್‌ನವರು ೧,೨೦೦ ಡಾಲರ್‌ಗಳನ್ನು ನಮಗೆ ಕ್ರೆಡಿಟ್ ಕೊಡುತ್ತಾರೆ. ಇವತ್ತು ನಾವ್ಯಾರೋ ನಾಲ್ಕಾರು ಜನ ಈ ಫಾರಿನ್ ಎಕ್ಸ್‌ಚೇಂಜ್ ಉಪಯೋಗಿಸಿಕೊಂಡಿದ್ದೇವೆಯೇ ಹೊರತು ಇತರೆ ಯಾವ ಸದಸ್ಯರೂ ಇದನ್ನು ಉಪ

ಯೋಗಿಸಿಕೊಂಡಿಲ್ಲ. ಆದ್ದರಿಂದ ಈ ಸೌಲಭ್ಯವನ್ನು ಹೆಚ್ಚು ಹೆಚ್ಚಾಗಿ ಮಾನ್ಯ ಸದಸ್ಯರು ಉಪಯೋಗಿಸಿ ಕೊಳ್ಳುವುದು ಒಳ್ಳೆಯದು. ತಮಿಳುನಾಡಿನಲ್ಲಿ ಮೂರನೇ ಎರಡು ಭಾಗ ಹಣವನ್ನು ಸರ್ಕಾರ ಕೊಟ್ಟರೆ ಇನ್ನುಳಿದ ಮೂರನೇ ಒಂದು ಭಾಗದ ಹಣವನ್ನು ಸದಸ್ಯರು ಕೊಡಬೇಕೆಂದು ಮಾಡಿದ್ದಾರೆ. ಇದನ್ನು ನಮ್ಮ ರಾಜ್ಯದಲ್ಲೂ ಮಾಡಲಿ In the interest of legislature to gain more knowledge I recommend that our legislators should also be sent to commonwealth countries. ಮಾನ್ಯ ಸದಸ್ಯರುಗಳು ಕರ್ನಾಟಕ ವಿಧಾನಮಂಡಲದ ವರದಿಗಾರರ ಬಗ್ಗೆ ಮಾತನಾಡಿದರು ಬಹಳ ಸಂತೋಷ. ಆದರೆ, ನಾನು ಕರ್ನಾಟಕ ವಿಧಾನಮಂಡಲದಲ್ಲಿ ಹಾಲಿ ನಾಲ್ಕನೇ ದರ್ಜೆ ನೌಕರರಾಗಿ ಏನು ಕೆಲಸ ಮಾಡುತ್ತಿದ್ದಾರೆ ಅಂತಹವರಲ್ಲಿ ಯಾರು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸು ಮಾಡಿರುತ್ತಾರೋ ಅಂತಹವರಿಗೆ ಪ್ರಮೋಷನ್ ಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡಬಯಸುತ್ತೇನೆ. ಇವರಿಗೆ ಬೇಸಿಕ್ ಕ್ವಾಲಿಫಿಕೇಷನ್ ಇರುವಾಗ ಏಕೆ ಪ್ರಮೋಷನ್ ಕೊಡಬಾರದು ?

ಇನ್ನು ಮಾನ್ಯ ಬಸವಲಿಂಗಪ್ಪನವರು ನ್ಯಾಯಾಂಗದ ಬಗ್ಗೆ, ನ್ಯಾಯಾಧೀಶರ ಬಗ್ಗೆ ಏಕೆ ಕೋಪಗೊಂಡಿದ್ದಾರೋ ಗೊತ್ತಿಲ್ಲ. ನ್ಯಾಯಾಧೀಶರನ್ನು ವರ್ಗಾವಣೆ ಮಾಡಬೇಕು ಎನ್ನುವ ಭಾವನೆಯಲ್ಲಿ ಅವರು ಮಾತನಾಡಿದರು. ಹಲವಾರು ವರ್ಷಗಳಿಂದ ರಾಜ್ಯ ಹೈಕೋರ್ಟಿಗೆ ಪರಿಶಿಷ್ಟ ವರ್ಗದವರು ಮುಖ್ಯ ನ್ಯಾಯಾಧೀಶರಾಗುವ ಅವಕಾಶವಾಗಿರಲಿಲ್ಲ. ಈಗ ಜಸ್ಟೀಸ್ ಭೀಮಯ್ಯನವರು ಮುಖ್ಯ ನ್ಯಾಯಾಧೀಶರಾಗುವವರಿದ್ದಾರೆ. ಈ ಹಂತದಲ್ಲಿ ಅವರು ಏಕೆ ಈ ಸಲಹೆಯನ್ನು ಕೊಟ್ಟರೋ ಗೊತ್ತಾಗಲಿಲ್ಲ. ಶ್ರೀ ಬಸವಲಿಂಗಪ್ಪನವರ ಬಾಯಿಂದ ಬರುವುದು ಇದಲ್ಲ. ಜಸ್ಟೀಸ್ ಭೀಮಯ್ಯನವರು ಶ್ರೇಷ್ಠ ನ್ಯಾಯಾಧೀಶರಾಗಿ ಬರುವ ಕಾಲದಲ್ಲಿ ಇಂತಹ ಸಲಹೆ ನ್ಯಾಯವಾದುದಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಹೈಕೋರ್ಟಿನ ಅನೇಕ ನ್ಯಾಯಾಧೀಶರಿಗೆ ತಾವು ಜೀವನಭೀಮಾನಗರದಲ್ಲಿ ಮನೆಗಳನ್ನು ಕೊಟ್ಟಿದ್ದೀರಿ. ಹಾಗೂ ಈಗ ಅವರಿಗೆ ವೆಕೇಟ್ ನೋಟೀಸ್ ಕೊಟ್ಟಿದ್ದೀರಿ. ಅವರಿಗೇ ಈ ನೋಟೀಸ್ ಕೊಟ್ಟರೆ ಏನು ಅರ್ಥ ಸ್ವಾಮಿ ? ಶೇಕಡಾ ೧೦ ಭಾಗವನ್ನು ಸಂಬಳದಲ್ಲಿ ಮುರಿದುಕೊಳ್ಳುತ್ತೀರಿ. ಅವರು ಈ ನೋಟೀಸ್ ಬಗ್ಗೆ ತಮ್ಮ ಕೋರ್ಟಿನಿಂದಲೇ ತಡೆಯಾಜ್ಞೆಯನ್ನು ತೆಗೆದುಕೊಂಡು ಬರಬೇಕೇ ಸ್ವಾಮಿ ? ಆದ್ದರಿಂದ, ದಯಮಾಡಿ ಕೋರ್ಟಿಗೆ ಹೋಗಿ ಅವರು ತಡೆಯಾಜ್ಞೆ ತರುವುದಕ್ಕೆ ಮೊದಲು ತಾವೇ ಈ ಬಗ್ಗೆ ಏನಾದರೂ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಕಳೆದ ವರ್ಷ ೧೯೮೦ರಲ್ಲಿ ಕೆಲವು ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡುವುದಕ್ಕಾಗಿ ಜಾಹಿರಾತು ಕೊಟ್ಟರು. ೫-೫ ರೂಪಾಯಿಗಳ ಪೋಸ್ಟಲ್ ಆರ್ಡರ್‌ಗಳನ್ನು ಹಾಕಿ ಅರ್ಜಿಗಳನ್ನು ಹಾಕಿದರೂ ಕೂಡ ಇದುವರೆವಿಗೂ ಕೂಡ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದಿಲ್ಲ, ಪರೀಕ್ಷೆ ಮಾಡಿಲ್ಲ. ತಮಗೆ ಬೇಕಾದಂತಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಶ್ರೇಷ್ಠ ನ್ಯಾಯಾಲಯದಲ್ಲಿಯೋ ಹೀಗಾದರೆ ಬೇರೆ ಕಡೆ ಯಾವ ರೀತಿಯಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ಇದನ್ನು ಡಿಲೇ ಆಫ್ ಜಸ್ಟೀಸ್ ಬಗ್ಗೆ ಬೇಕಾದಷ್ಟು ಜನ ಮಾತನಾಡಿದ್ದಾರೆ. ತಾವು ಕೋರ್ಟುಗಳಿಗೆ ಕೊಟ್ಟಿರುವಂತಹ ತಡೆಯಾಜ್ಞೆ ಕೊಡುವಂತ ವ್ಯವಸ್ಥೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಕ್ಷೇಮವೆಂದು ನಾನು ಹೇಳುತ್ತೇನೆ. ಇದನ್ನು ನಮ್ಮ ಸ್ನೇಹಿತರು ಒಪ್ಪುವುದಿಲ್ಲ. ಇವತ್ತು ಯಾವುದಕ್ಕೂ ಬೇಕಾದರೂ ತಡೆಯಾಜ್ಞೆ ತರಬಹುದು. ಮನೆ ಕಟ್ಟಬೇಕಾದರೆ, ರಸ್ತೆಗಳನ್ನು ಮಾಡಬೇಕಾದರೆ, ಇವರಿಂದ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುವುದನ್ನು ನಾವು ನೋಡುತ್ತಿದ್ದೇವೆ. ಸಾಮಾನ್ಯವಾದ ಜನ ಇದನ್ನು ನೋಡಿ ನಗುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ.—ತಮಗೆ ಎವಿಕ್ಷನ್ ನೋಟೀಸ್ ಕೊಟ್ಟು ಮನೆಯಿಂದ ಎತ್ತಿಹಾಕುತ್ತಾರೆ. ಆಗ ತಡೆಯಾಜ್ಞೆ ಬೇಕೋ ಬೇಡವೋ ?

ಶ್ರೀ ಪಿ. ರಾಮದೇವ್.—ತಡೆಯಾಜ್ಞೆಯಿಂದ ಆಗಿರತಕ್ಕಂಥ ಅನಾಹುತಗಳ ಬಗ್ಗೆ ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ —ಶ್ರೀ ರಾಮದೇವ್‌ರವರು ಮಾತನಾಡಿದರೆ. ಕುಮಾರಿ ಪ್ರಮೀಳಾ ಮಾತನಾಡುತ್ತಾರೆ, ಕುಮಾರಿ ಪ್ರಮೀಳಾ ಮಾತನಾಡಿದರೆ ಶ್ರೀ ರಾಂದೇವ್ ಮಾತನಾಡುತ್ತಾರೆ, ಇವರಿಗೆ ತಡೆಯಾಜ್ಞೆ ಕೊಡಿ ಸ್ವಾಮಿ !

ಶ್ರೀ ಪಿ. ರಾಂದೇವ್.—ತಡೆಯಾಜ್ಞೆ ಹಾವಳಿ ಎಲ್ಲಿಯವರೆಗೆ ಹೋಗಿದೆ ಅಂದರೆ, ಒಬ್ಬಳು ಗರ್ಭಿಣಿ ಸ್ತ್ರೀ ಹೆರಿಗೆಗಾಗಿ ಆಸ್ಪತ್ರೆಗೆ ಹೋದರೆ, ಹುಟ್ಟುವಂತಹ ಮಗುವಿನಿಂದ ಪ್ರಪಂಚಕ್ಕೆ ನಷ್ಟವಾಗುತ್ತದೆ, ತಡೆಯಾಜ್ಞೆ ಕೊಡಬೇಕೆಂದು ಅಂದರೆ ತಡೆಯಾಜ್ಞೆ ಕೊಡುತ್ತಾರೆ

SRI M.C NANAIAH.—With all respect I say while making certain observations about th judiciary and the judicial decisions, let us have some restraint. Let us not make cheap jokes on the floor of the House as far as the judiciary and the judicial decisions are concerned. That is my request to my friend Sri Ramdev.

MR DEPUTY SPEAKER.—I agree.

ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಸಾಮಾನ್ಯ ಜನತೆಯ ಭಾವನೆಯನ್ನು ನಾನು ತಮ್ಮ ಮುಂದಿಟ್ಟಿದ್ದೇನೆ. ಮಾನ್ಯ ಸದಸ್ಯರಾದ ಹನುಮೇಗೌಡರು ನಮ್ಮನ್ನು ಬೈದರು. ಬಳಕೆದಾರರಿಗೆ ಬೆಲೆ ಜಾಸ್ತಿಯಾದಾಗ ನೀವು ಗಲಾಟೆ ಮಾಡುತ್ತೀರಿ ರೈತರಿಗೆ ತೊಂದರೆಯಾಗುವುದನ್ನು ತಾವು ನೋಡುವುದಿಲ್ಲವೆಂದು ಹೇಳಿದರು. ಮಾನ್ಯ ರಾಮಕೃಷ್ಣರವರು ಬೆಂಗಳೂರು ನಗರದ ಜನತೆಗೆ ಹಾಲು ಸರಬರಾಜು ಮಾಡುತ್ತಾರೆ. ನಾವು ಹಾಲು ಉತ್ಪಾದಕರಿಗೆ ಹೆಚ್ಚಿನ ದರವನ್ನು ಕೊಡುವುದಾದರೆ ಅಡ್ಡಿ ಬರುವುದಿಲ್ಲ. ಕರ್ನಾಟಕ ಡೈರಿ ಡವಲಪ್‌ಮೆಂಟ್ ಕಾರ್ಪೊರೇಷನ್‌ರವರು ೮೦,೦೦೦ ಲೀಟರ್ ಹಾಲನ್ನು ಸಂಗ್ರಹಣೆ ಮಾಡುತ್ತಾರೆ. ಇದು ನಿಜವಾದ ಅಸಲಿ ಹಾಲು. ೮೦,೦೦೦ ಲೀಟರ್ ಹಾಲನ್ನು ಎರಡೂವರೆ ಲಕ್ಷ ಲೀಟರ್ ಹಾಲಾಗಿ ಮಾಡುತ್ತಾರೆ, ಹೇಗೆ ಮಾಡುತ್ತಾರೆ ? ಇದಕ್ಕೆ ಕಾವೇರಿ ನದಿ ನೀರು, ಡೆನ್ಮಾರ್ಕ್ ಹಾಲಿನ ಪುಡಿ ಸೇರಿಸಿ ಎರಡೂವರೆ ಲಕ್ಷ ಲೀಟರ್ ಹಾಲನ್ನು ಮಾಡಿ ಬಳಕೆದಾರರಿಗೆ ಒದಗಿಸುತ್ತಾರೆ. ಇದಕ್ಕೆ ೨.೪೦ ಪೈಸೆ ಚಾರ್ಜು ಮಾಡುತ್ತಾರೆ. ತಾಜಾ ಹಾಲಿಗೆ ೨.೦೫ ಪೈಸೆ ಕೊಡುತ್ತಾರೆ. ಮಿಲ್ಕ್ ಪೌಡರ್‌ನಿಂದ ತಯಾರು ಮಾಡತಕ್ಕ ಒಂದು ಲೀಟರ್ ಹಾಲಿಗೆ ೮೦ ಪೈಸೆ ಬೀಳುತ್ತೆ. ತಾಜಾ ಹಾಲನ್ನು ೪೦ ಪರ್ಸೆಂಟ್ ಹಾಕಿ, ೬೦ ಪರ್ಸೆಂಟ್ ಹಾಲಿನ ಪುಡಿಯಿಂದ ತಯಾರು ಮಾಡಿದ ಹಾಲನ್ನು ಮಿಕ್ಸ್ ಮಾಡಿ, ೨.೪೦ ಪೈಸೆಗೆ ಬಳಕೆದಾರರಿಗೆ ಮಾರುತ್ತೀರಲ್ಲ, ಇದು ಮೋಸ ಮಾಡಿದಂತಲ್ಲವೆ ? ನಾವು ರೈತರಿಗೆ ಕೊಡುವುದಕ್ಕೆ ಹಾಲು ಉತ್ಪಾದಕರಿಗೆ ಕೊಡುವುದಕ್ಕೆ ಅಡ್ಡಿ ಬರುವುದಿಲ್ಲ. ೧.೦೮ ಪೈಸೆ ತೆಗೆದುಕೊಂಡು ೨.೪೦ ಪೈಸೆ ಕೊಡುವುದು ಮೋಸವಲ್ಲವೆ ? ೧.೪೦, ೧.೫೦ ಹಾಗೂ ೧.೬೦ ಸಬ್‌ಸಿಡೈಸ್ ಮಾಡಿ, ಇಂಥ ಒಂದು ವ್ಯವಸ್ಥೆ ಡೆಲ್ಲಿ ಮತ್ತು ಮುಂಬಯಿ ಹಾಗೂ ಕಲ್ಕತ್ತ ನಗರಗಳಲ್ಲಿ ಇದೆ. ಸರ್ಕಾರವೇ ಮೋಸ ಮಾಡಿದಂತಲ್ಲವೆ ? ತಾವು ಒದಗಿಸುವ ಹಾಲನ್ನು ಮದ್ರಾಸ್ ಲ್ಯಾಬೋರೇಟರಿಗೆ ಕಳುಹಿಸಿದರೆ ಕಲಬೆರಕೆ ಇರುವುದರಿಂದ ಪ್ರಾಸಿಕ್ಯೂಟ್ ಮಾಡುತ್ತಾರೆ. ಇದರ ಬಗ್ಗೆ ತಾವು ಪುನರ್‌ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ.

ತಾವು ಹಿಂದೆ ಕೂಡ ಪಶುಸಂಗೋಪನೆ ಬಗ್ಗೆ ಉತ್ತರ ಕೊಡುತ್ತಾ, ಮಲ್ಲೇಶ್ವರಂನಲ್ಲಿರತಕ್ಕ ಪಶು ವೈದ್ಯ ಶಾಲೆಯನ್ನು ಅಪ್‌ಗ್ರೇಡ್ ಮಾಡುತ್ತೇವೆ, ಯಶವಂತಪುರದಲ್ಲಿ ಒಂದು ಕ್ಲಿನಿಕ್ ಮಾಡುತ್ತೇವೆಂದು ಹೇಳಿದಿರಿ, ಇದುವರೆಗೂ ಜಾರಿಗೆ ಬರಲಿಲ್ಲ. ಇವೆರೆಡನ್ನೂ ಕೂಡ ಮಾಡಿಕೊಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತಂಗಳನ್ನು ಮುಗಿಸುತ್ತೇನೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮತ್ತು ಪಶುಸಂಗೋಪನಾ ಮಂತ್ರಿಯವರು ಈ ಸಭೆಯ ಮುಂಡಿಸಿರುವ ಬೇಡಿಕೆಗಳನ್ನು ಬೆಂಬಲಿಸುತ್ತಾ, ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಕಾನೂನು ಇಲಾಖೆಯಲ್ಲಿ ಜನಸಾಮಾನ್ಯರಿಗೆ ರಕ್ಷಣೆ ಸುಲಭದಲ್ಲಿ ಸಿಗುವಂತ ಶೃತಿಯನ್ನು ಇಟ್ಟುಕೊಂಡು ತಾಲ್ಲೂಕು ಪ್ರದೇಶಗಳಲ್ಲಿ ಇತ್ತೀಚಿಗೆ ಹೆಚ್ಚು ಹೆಚ್ಚು ನ್ಯಾಯಾಲಯಗಳನ್ನು ತೆರೆಯಲಾಗುತ್ತಿದೆ. ಅಲ್ಲದೆ, ಹಿಂದೆಂದೂ ಇಲ್ಲದಷ್ಟು ನ್ಯಾಯಾಲಯಗಳ ಕಟ್ಟಡಗಳನ್ನು ಕೂಡ ಕಟ್ಟಿಸಲಾಗುತ್ತಿದೆ. ಸಾಗರ ತಾಲ್ಲೂಕಿಗೊಂದು ಸಿವಿಲ್ ಜಡ್ಜ್ ಕೋರ್ಟನ್ನು ಕೊಟ್ಟು, ಹೊಸ ಕಟ್ಟಡವನ್ನು ಕೊಟ್ಟಿರುತ್ತಾರೆ. ಗ್ರಾಮಾಂತರ ಜನತೆಗೆ ನ್ಯಾಯ ದೊರಕಿಸುವ

ದಿಸೆಯಲ್ಲಿ ಮಾನ್ಯ ಮಂತ್ರಿಯವರು ಮಾಡಿರುವ ಪ್ರಯತ್ನಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಿವಿಲ್ ನ್ಯಾಯಾಲಯದಲ್ಲಿ ಬಹಳ ಕೇಸುಗಳು ಬಾಕಿ ಉಳಿದಿರುತ್ತವೆ. ಇವುಗಳನ್ನು ವಿಲೇ ಮಾಡುವುದಕ್ಕೆ ತುರ್ತು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪಶುವೈದ್ಯ ಇಲಾಖೆ ರೈತರಿಗೆ ಅತ್ಯಂತ ಮುಖ್ಯವಾದ ಇಲಾಖೆ. ರೈತನ ಸಂಪತ್ತನ್ನು ಯಾವುದರಿಂದ ಗಣನೆ ಮಾಡುತ್ತಾರೆ ಅಂದರೆ ಆತನ ಪಶುಸಂಪತ್ತು ಎಷ್ಟಿದೆ ಎನ್ನುವುದನ್ನು ನೋಡಿ ಗಣನೆ ಮಾಡುತ್ತಾರೆ ಪಶುಸಂಪತ್ತು ಕಡಿಮೆಯಾದರೆ ರೈತಾಪಿ ಜನರ ಕೆಲಸ ಹಾಳಾಗುತ್ತದೆ. ಇನ್ನು ಮುಂದೆ ಕ್ಷೀರ ಕ್ರಾಂತಿ ಯೋಜನೆಯನ್ನು ತರುತ್ತಿದ್ದಾರೆ. ಈ ಬಗ್ಗೆ ಶ್ರೀ ರಾಮಕೃಷ್ಣ ಅವರ ಕಾಲದಲ್ಲಿ ಮಹತ್ಸಾಧನೆಗಳು ಆಗುತ್ತಿದೆ. ಮಾನ್ಯ ಸಚಿವರು ಈ ಖಾತೆಯನ್ನು ತೆಗೆದುಕೊಂಡಾಗಲೇ ಇದು ಚೆನ್ನಾಗಿ ಅಭಿವೃದ್ಧಿಯಾಗುತ್ತದೆಂದು ತಿಳಿದುಕೊಂಡಿದ್ದೆ. ಅದರಂತೆ ಅಭಿವೃದ್ಧಿ ಕೆಲಸ ನಡೆಯುತ್ತಿದೆ. ಶ್ರೀರಾಮಕೃಷ್ಣ ಅಂದರೆ ರಾಮ-ಕೃಷ್ಣ, ಕೃಷ್ಣ ಅಂದರೆ ಗೋಸಂಪತ್ತಿಗೆ ಆಧಾರ ಇದ್ದ ಹಾಗೆ ಇದ್ದಾರೆ ಮಾನ್ಯ ಮಂತ್ರಿಗಳು ಕ್ಷೀರ ಕ್ರಾಂತಿ ಎಂದು ಹೇಳಿದ್ದಾರೆ. ಬಹಳ ಸಂತೋಷ ಪಶುಸಂಪತ್ತು ಹೆಚ್ಚಿಸುವ ಬಗ್ಗೆ ಇಲಾಖೆ ಜಾಗ್ರತೆ ವಹಿಸಬೇಕು. ಬೆಂಗಳೂರು ಮೈಸೂರು ಇಂಥ ಪಟ್ಟಣಗಳಿಗೆ ಪೌಷ್ಟಿಕ ಆಹಾರ ಬೇಕು. ಹಾಲು ಬೇಕು ಎನ್ನುವ ದೃಷ್ಟಿಯಿಂದ ಯೋಚನೆ ಮಾಡಿದರೆ ಸಾಲುವುದಿಲ್ಲ. ಎಲ್ಲಾ ಜಿಲ್ಲೆಗಳಿಗೂ ಹೆಚ್ಚು ಗಮನ ಕೊಡಬೇಕು. ನಾನು ಮಲೆನಾಡು ಭಾಗದಿಂದ ಬರತಕ್ಕವನು ಅಲ್ಲಿಯ ಪರಿಸ್ಥಿತಿ ಹೇಗಿದೆ ಎಂದರೆ ಅಲ್ಲಿ ಗದ್ದೆ ಉಳುವುದಕ್ಕೆ ಮೊದಲಿನ ತರಹ ಎತ್ತುಗಳು ಇಲ್ಲ. ಒಳ್ಳೆಯ ಎಮ್ಮೆ, ಆಕಳು, ಆ ಭಾಗಕ್ಕೆ ಒದಗಿಸಬೇಕಾಗುತ್ತದೆ. ಮೊದಲು ಹಳ್ಳಿಕಾರ್ ಜಾತಿಯವು ಇದ್ದವು. ಅವುಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಯಾವುದೇ ರೀತಿಯ ಕೆಲಸ ನಡೆದಿಲ್ಲ. ಹಳ್ಳಿಕಾರ್ ಜಾತಿ ಉಳಿಸಿದ್ದರೆ, ಬೆಳೆಸಿದ್ದರೆ ಮಲೆನಾಡು ಭಾಗದಲ್ಲಿ ಅತ್ಯಂತ ದೊಡ್ಡ ಸಂಪತ್ತು ಆಗುತ್ತಿತ್ತು. ಈ ದಿಸೆಯಲ್ಲಿ ಕೆಲಸ ನಡೆದಿಲ್ಲ. ಇನ್ನು ಅಜ್ಜಂಪುರ, ಅಮೃತಮಹಲ್ ಕಾವಲ್ ಬಗ್ಗೆ ಹೇಳುತ್ತಾ ಸಾವಿರಾರು ಎಕರೆ ಭೂಮಿ ಅಮೃತಮಹಲ್ ಕಾವಲಿಗೆ ಲಭ್ಯ ಇದೆ ಎಂದು ಹೇಳಿದ್ದಾರೆ. ಈಗಾಗಲೇ ಅದನ್ನು ಅರಣ್ಯ ಅಭಿವೃದ್ಧಿಗೆ ತೆಗೆದುಕೊಳ್ಳತಕ್ಕಂಥ ವಿಚಾರ ಕೇಳುತ್ತಿದ್ದೇನೆ. ದಯಮಾಡಿ ಅದನ್ನು ಕೊಡಬೇಡಿ. ಮೊದಲು ನಮ್ಮ ಕಡೆಗಳಲ್ಲಿ ಪ್ರತಿಯೊಂದು ಗ್ರಾಮಗಳಲ್ಲೂ ಗೋಮಾಳ ಇತ್ತು. ಎಷ್ಟೆಷ್ಟು ಜಾನುವಾರುಗಳು ಇರುತ್ತವೆ ಆ ಲೆಕ್ಕದ ಪ್ರಕಾರ ಇಷ್ಟು ಗೋಮಾಳ ಬಿಡಬೇಕು ಎನ್ನುವುದು ಮೊದಲು ಇತ್ತು. ಅನಂತರ ಸಿ ಅಂಡ್ ಡಿ ಕ್ಲಾಸಿಫಿಕೇಷನ್ ಮಾಡಿ ಇದು ವ್ಯವಸಾಯಕ್ಕೆ ಯೋಗ್ಯ ಜಮೀನು ಅಂತ ಅರಣ್ಯ ಇಲಾಖೆಗೆ ವಹಿಸಿದ್ದಾರೆ ಒಂದಲ್ಲ ಒಂದು ದಿವಸ ಇದೂ ಕೂಡ ಸಿ. ಅಂಡ್ ಡಿ ಕ್ಲಾಸಿಫಿಕೇಷನ್ ಪ್ರಕಾರ ತೆಗೆದುಕೊಂಡರೆ ಆ ಕಡೆ ಅರಣ್ಯ ಅಭಿವೃದ್ಧಿಯಾಗುವುದಿಲ್ಲ, ಈ ಕಡೆ ಜಾನುವಾರುಗಳಿಗೂ ಮೇವು ಇಲ್ಲದಂಥ ರೀತಿಯಲ್ಲಿ ಆದೀತು. ಇವೊತ್ತು ನೀರು ಮೇವು ಇರತಕ್ಕ ಮಲೆನಾಡಿನ ಪ್ರದೇಶದಲ್ಲಿಯೇ ಪಶುಸಂಪತ್ತು ಹೆಚ್ಚುತ್ತಾ ಇಲ್ಲ. ತಾವು ಹೇಳುವ ಪ್ರಕಾರ ಕ್ಷೀರ ಕ್ರಾಂತಿ ನಡೆಯಬೇಕು. ಸಾಲ ಮಾಡಿಯಾದರೂ ತುಪ್ಪ ತಿನ್ನು ಎಂದು ಹಿಂದಿನವರು ಹೇಳಿದ್ದಾರೆ. ಆದ್ದರಿಂದ ಸಾಲ ಮಾಡಿಯಾದರೂ ತುಪ್ಪ ತಿನ್ನಲೇಬೇಕಾಗುತ್ತದೆ. ಇವೊತ್ತು ನಮ್ಮ ಪಶುಸಂಪತ್ತು ಯಾವ ರೀತಿ ಇದೆ? ೨ ಸಾವಿರ ೪ ಸಾವಿರ ೬ ಸಾವಿರ ರೂಪಾಯಿ ಕೊಟ್ಟು ಉತ್ತಮ ತಳಿ ಸಾಕುವುದಕ್ಕೆ ಎಷ್ಟು ಕಡೆ ಸಾಧ್ಯವಿದೆ? ಹವಾಗುಣ ಪರಿಸ್ಥಿತಿ ಹಿನ್ನೆಲೆಯಲ್ಲಿ ಇದು ಎಷ್ಟು ಕಡೆ ಸಾಧ್ಯವಿದೆ. ಇವೊತ್ತು ಮಲೆನಾಡು ಭಾಗದ ಹಳ್ಳಿಯ ಹವಾಗುಣಕ್ಕೆ ಅಲ್ಲಿರುವ ಭೂಮಿಗೆ ಹೊಂದಿಕೊಳ್ಳುವ ಹಾಗೆ ಪಶುಗಳನ್ನು ಬೆಳೆಸಬೇಕಾಗಿದೆ. ಅಂಥ ಕಡೆ ಪಶುಸಂರಕ್ಷಣಾ ಕೇಂದ್ರವನ್ನು ಬೆಳೆಸಲಿಕ್ಕೆ ಅವಕಾಶ ಮಾಡಿಕೊಡಬೇಕು. ಹಿಂದೆ ನಮ್ಮ ತಾಲ್ಲೂಕುಗಳಿಗೆ ಹೊಂದಿಕೊಳ್ಳುವಂಥ ಎಮ್ಮೆ, ಆಕಳು ಹರಿಯಾಣದಿಂದ ಕಳುಹಿಸಿಕೊಟ್ಟರು. ಹಿಂದೆ ಶ್ರೀ ಕೆ. ಜಿ. ಒಡೆಯರ್ ಅವರು ನಮಗೆ ಹರಿಯಾಣದಿಂದ ಎಮ್ಮೆಗಳನ್ನು ತರಿಸಿಕೊಟ್ಟರು. ಕೆಲವು ವೃದ್ಧಿಯಾಗಿವೆ ಚೆನ್ನಾಗಿವೆ, ಇಂಥ ರೀತಿಯಲ್ಲಿ ನಮಗೆ ಹೊಂದುವಂಥ ತಳಿಯನ್ನು ಬೆಳೆಸಲಿಕ್ಕೆ ಅನುಕೂಲ ಮಾಡಿಕೊಡಬೇಕು. ಇವೊತ್ತು ಕಾನೂನು ಇಲಾಖೆಯಲ್ಲಿ ಎಷ್ಟೋ ಒಳ್ಳೆಯ ಕೆಲಸ ಮಾಡಿದ್ದೀರಾ ಅದಕ್ಕೆ ನಾನು ತಮಗೆ ವಂದನೆ ಸಲಿಸುತ್ತೇನೆ. ಇಲ್ಲಿಯೂ ಕೂಡ ಬಹಳ ದಿವಸದಿಂದ ಈ ಇಲಾಖೆಯ ನೌಕರರಲ್ಲಿ ಒಂದು ಅಶಾಂತಿ ಏನು ಇತ್ತು ಅದನ್ನು ಹೋಗಲಾಡಿಸುವ ಕೆಲಸವನ್ನು ಇವೊತ್ತು ಮಾಡಿದ್ದೀರಿ. ಜನಾರೋಗ್ಯ ಇಲಾಖೆಗೆ ಸರಿಸಮಾನವಾದ ಶ್ರೇಣಿಯನ್ನು ಕೊಟ್ಟಿದ್ದೀರಿ ಅವರ ಬೇಡಿಕೆಗಳನ್ನು ಈಡೇರಿಸುವ ಮೂಲಕ ಪದವೀಧರರಾಗಿ ಅಭ್ಯಾಸ ಮಾಡಿದಂಥವರು ಇಲ್ಲಿಯೇ ಉಳಿದು ಚೆನ್ನಾಗಿ

ಕೆಲಸ ಮಾಡಲಿಕ್ಕೆ ತಾವು ಉತ್ತಮ ಕೆಲಸ ಮಾಡಿದ್ದೀರಿ. ಗುಜರಾತ್‌ನಲ್ಲಿ ಪಶುಸಂಪತ್ತು ಹೆಚ್ಚು ಅಭಿವೃದ್ಧಿಯಾಗುತ್ತಿದೆ. ಅಲ್ಲಿ ಹಳ್ಳಿಯ ಉಪಯೋಗಕ್ಕೆ ಬಾರದೆ ಹಾಲು ಕೊಡದ ಎಮ್ಮೆ, ಆಕಳು ಸಿಕ್ಕುವುದಿಲ್ಲ. ಅದರ ಬಗ್ಗೆ ನಾನು ಹೋಗಿ ನೋಡಿದ್ದೇನೆ. ಆನಂದ ಮಿಲ್ಕ್ ಡೈರಿ ಏತಕ್ಕೆ ಚೆನ್ನಾಗಿದೆ ಅಂದರೆ ಅಲ್ಲಿ ಫೀಡಿಂಗ್ ಚೆನ್ನಾಗಿದೆ. ಒಳ್ಳೆಯ ಅಭಿವೃದ್ಧಿಯಾದ ಪಶುಗಳಿವೆ. ನಮ್ಮಲ್ಲಿರ ತಕ್ಕ ಆಕಳುಗಳು ಒಂದು ಪಾವು ಹಾಲು ಕೊಡುವುದಿಲ್ಲ. ಅವುಗಳೇನಾದರೂ ಕರು ಹಾಕಿದರೆ ಆ ಕರುವಿಗೆ ಬೇಕಾದ ಹಾಲು ಕೊಡಲಿಕ್ಕೆ ಸಾಧ್ಯವಿಲ್ಲ. ಇನ್ನು ನಮ್ಮಲ್ಲಿರತಕ್ಕ ಆಕಳು ಎಷ್ಟು ಎತ್ತರ ಇದೆ ಎಂದರೆ ಕಿಟಕಿಯಲ್ಲಿ ತೂರಿ ಹೋಗುತ್ತವೆ. ಪಶುಗಳ ಅಭಿವೃದ್ಧಿ ಬಗ್ಗೆ ಹೆಚ್ಚು ಆಸಕ್ತಿ ಇದ್ದರೆ ಗುಜರಾತಿನಲ್ಲಿ ಯಾವರೀತಿ ನಡೆಯುತ್ತಿದೆ ಆ ತರಹ ಇಲ್ಲಿ ಅಭಿವೃದ್ಧಿಪಡಿಸಬೇಕು. ಇವೊತ್ತು ನಮ್ಮಲ್ಲಿರ ತಕ್ಕ ಜಾನುವಾರುಗಳು ಬೇಕಾಬಿಟ್ಟಿ ಜಾನುವಾರುಗಳಾಗಿವೆ. ನಮ್ಮ ಜಾನುವಾರು ಏತಕ್ಕೆ ಇವೆ ಎಂದರೆ ಪೈರು ಹಾಳು ಮಾಡಲಿಕ್ಕೆ ಇವೆ. ಪಶುಸಂಪತ್ತು ಆಗುವುದಕ್ಕೆ ಇಲ್ಲ. ಆದ್ದರಿಂದ ಪಶುಸಂಪತ್ತು ಹೆಚ್ಚಾಗಬೇಕೆನ್ನುವ ದೃಷ್ಟಿಯನ್ನಿಟ್ಟುಕೊಂಡು ನಮ್ಮ ಪ್ರದೇಶಕ್ಕೆ ಹೊಂದಿಕೊಳ್ಳುವಂಥ ತಳಿಗಳನ್ನು ತರಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಗೋಮಾಳ ಭೂಮಿ ರಕ್ಷಣೆ ಮಾಡತಕ್ಕ ವಿಶೇಷ ಜವಾಬ್ದಾರಿ ತಾವು ಹೊರಬೇಕಾಗಿದೆ. ಕೆಲವೊಂದು ವಿಶೇಷವಾದ ತಳಿಯನ್ನು ನಮ್ಮ ಮಲೆನಾಡು ಭಾಗಕ್ಕೆ ಹೊಂದಿಕೊಳ್ಳುವಂಥ ತಳಿಗಳನ್ನು ನಮ್ಮ ಭಾಗಕ್ಕೆ ಒದಗಿಸಿಕೊಡಬೇಕು. ಇನ್ನು ಐ. ಆರ್. ಡಿ. ಪ್ರೋಗ್ರಾಂನಲ್ಲಿ ಹರಿಜನ ಹಾಗೂ ಹಿಂದುಳಿದ ವರ್ಗಗಳವರಿಗೆ ಎಮ್ಮೆ ಆಕಳು ಎತ್ತುಗಳನ್ನು ಕೊಡುತ್ತಿದ್ದೀರಿ. ಅವರಿಗೆ ಒಳ್ಳೆಯ ಜಾತಿಯ ರಾಸುಗಳು ಸಿಕ್ಕುವುದಿಲ್ಲ, ಅವರಿಗೆ ಬೇಕಾಬಿಟ್ಟಿ ಯಾವುದೋ ರಾಸುಗಳನ್ನು ಕೊಡುತ್ತಾರೆ. ಅವುಗಳನ್ನು ಅವರು ಸಾಗಾಣಿಕೆ ಮಾಡಿದರೂ ಲಾಭದಾಯಕವಾಗುತ್ತಿಲ್ಲ. ಆದ್ದರಿಂದ ಅವರಿಗೆ ಉತ್ತಮವಾದಂಥ ಪಶುಸಂಪತ್ತನ್ನು ಕೊಡಬೇಕು. ಇನ್ನು ತಾವು ಕುರಿಗಳನ್ನು ಕೊಡತಕ್ಕದ್ದು ಇದೆ. ಕೇರಳದಲ್ಲಿ ಕ್ಯಾಲಿಕಟ್ ಡೈರಿ ಇದೆ ಅಂತ ಕೇಳಿದ್ದೇನೆ, ಅಲ್ಲಿ ಒಳ್ಳೆಯ ತಳಿಗಳು ಸಿಕ್ಕುತ್ತವೆ. ಆ ತರಹದ ಕುರಿಗಳನ್ನು ಬಡವನಿಗೆ ಒಂದು ಯೂನಿಟ್ ಕೊಡಿಸಿದರೆ ಎರಡು ವರ್ಷಕ್ಕೆ ಮೂರು ಯೂನಿಟ್ ಆಗುವ ರೀತಿಯಲ್ಲಿ ಆದರೆ ಬಡವನಿಗೆ ಉಪಯೋಗವಾಗುತ್ತದೆ. ಅದನ್ನು ಬಿಟ್ಟು ತಾವು ಕೊಡತಕ್ಕ ಕುರಿಗಳು ಬದುಕದೇ ಹೋದರೆ, ಅವುಗಳು ಮರಿ ಹಾಕಿದ್ದು ಉಳಿಯದೆ ಹೋದರೆ ಏನು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಆಯಾ ಭಾಗಕ್ಕೆ ಹೊಂದಿಕೊಳ್ಳುವಂಥ ತಳಿಗಳನ್ನು ಕೊಡಿಸಬೇಕು. ಇನ್ನು ನಮ್ಮ ಭಾಗದಲ್ಲಿ ಆಸ್ಪತ್ರೆಗಳು ಏನಿವೆ, ಅಲ್ಲಿ ಆ ಪ್ರದೇಶದಲ್ಲಿ ಬರತಕ್ಕ ಖಾಯಿಲೆಗಳಿಗೆ ಬೇಕಾದಂಥ ಔಷಧಿ ಇರುವುದಿಲ್ಲ, ಯಾವ ಯಾವ ಭಾಗದಲ್ಲಿ ಏನೇನು ಖಾಯಿಲೆಗಳು ಬರುತ್ತವೆ ಅದಕ್ಕೆಲ್ಲಾ ಔಷಧಿಗಳು ಆಯಾ ಆಸ್ಪತ್ರೆಗಳಲ್ಲೇ ಸಿಕ್ಕುವಂಥ ವ್ಯವಸ್ಥೆ ಮಾಡಬೇಕು. ಇನ್ನು ಆರ್. ವಿ. ಡಿ. ಎರಡು ವರ್ಷದ ಹಿಂದೆ ನಮಗೆ ಮಂಜೂರಾತಿ ಮಾಡಿದರು ಅಂತ ಇದೆ. ಕೆಲವೊಂದು ಅಪ್‌ಗ್ರೇಡ್ ಮಾಡಿದರು. ಯಾವುದರಲ್ಲಿಯೂ ಏನೂ ಅಪ್‌ಗ್ರೇಡ್ ಬರಲಿಲ್ಲ. ಸಿಬ್ಬಂದಿ ಇಲ್ಲ. ಅಪ್‌ಗ್ರೇಡ್‌ಗೆ ಸಿಬ್ಬಂದಿ ಇಲ್ಲ. ಆರ್.ವಿ.ಡಿ. ನಿಜವಾಗಿ ಅದು ಪ್ರಾರಂಭವಾಗಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಇವುಗಳನ್ನು ಯಾವಾಗ ಪ್ರಾರಂಭಿಸುತ್ತಾರೆ ಎನ್ನುವುದನ್ನು ತಿಳಿಸಬೇಕು. ಪಶುಸಂಪತ್ತು ಹೆಚ್ಚು ಮಾಡುವುದರ ಜೊತೆಗೆ ರೈತರಿಗೆ ಹೆಚ್ಚು ಅನುಕೂಲವಾಗುವಂಥ ಆ ಪ್ರದೇಶಕ್ಕೆ ಹೊಂದಾಣಿಕೆಯಾಗುವಂಥ ರಾಸುಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪಶ್ಚಿಮ ಘಟ್ಟ ಯೋಜನೆಯಲ್ಲಿ ನಮಗೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ ಕೊಟ್ಟರು. ಅದಕ್ಕೆ ಸೆಮನ್ ಒದಗಿಸಬೇಕೆಂದು ಏನು ಪ್ರಯೋಜನವಾಗಬೇಕೋ ಅದು ಆಗುತ್ತಿಲ್ಲ. ಇನ್ನು ಸಂಚಾರಿ ವಾಹನಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಸಿಬ್ಬಂದಿ ಇಲ್ಲ. ಅವುಗಳ ಬಗ್ಗೆ ಸ್ವಲ್ಪ ಹೆಚ್ಚು ಚುರುಕುಗೊಳಿಸಬೇಕು. ಪಶುವೈದ್ಯ ಇಲಾಖೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್‌ನಲ್ಲಿ ಸಿಬ್ಬಂದಿ ಸರಿಯಾಗಿ ಕೊಡಬೇಕು. ಆರ್.ವಿ.ಡಿ.ಗೆ ಸಿಬ್ಬಂದಿ ಕೊಡಬೇಕು. ಇನ್ನು ಹಳ್ಳಿಗಾಡುಗಳಲ್ಲಿ ದೂರ ಹೋಗಬೇಕಾದಂಥ ಪರಿಸ್ಥಿತಿ ಇರುವ ಕಡೆ ಮೋಟಾರ್‌ಬೈಕ್‌ನಲ್ಲಿ ಹೋಗಬೇಕಾಗುತ್ತದೆ. ಕೆಲವು ಪ್ರದೇಶಗಳಲ್ಲಿ ರೈತರು ಬಂದು ಡಾಕ್ಟರಿಗೆ ಹೇಳಿ ಹೋಗುವಷ್ಟರಲ್ಲಿ ಜಾನುವಾರುಗಳು ಸತ್ತುಹೋಗುವಂಥಾದ್ದು ಇರುತ್ತದೆ. ಆದ್ದರಿಂದ ಈ ರೀತಿ ಫೀಲ್ಡ್ ಮೇಲೆ ಹೋಗತಕ್ಕವರಿಗೆ ಹಳ್ಳಿಗಾಡುಗಳಲ್ಲಿ ದೂರ ದೂರ ಹೋಗತಕ್ಕವರಿಗೆ ಮೋಟಾರ್‌ಬೈಕ್ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಂಚಾರಿ ಪಶುವೈದ್ಯ ಶಾಲೆಗಳಿಗೂ ಕೂಡ ಸಿಬ್ಬಂದಿಯನ್ನು ಕೂಡಲೇ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ಮಂಜೂರಾಗಿದ್ದಂಥ ಆರ್.ವಿ.ಡಿ.ಗಳನ್ನು ಕೂಡಲೇ ಸ್ಥಾಪನೆ ಮಾಡ

ಬೇಕು. ಕೆಲವು ಗೋಮಾಳ ಪ್ರದೇಶಗಳು ಏನಿವೆ ಅವುಗಳು ಬೇರೆಯವರ ಹಸ್ತಗತವಾಗದಂತೆ ನೋಡಿಕೊಂಡು ರೈತರಿಗೆ ಅದು ಸಿಕ್ಕುವಂತೆ ಮಾಡಬೇಕು. ನಮ್ಮ ಕಡೆ ವಿಶೇಷವಾಗಿ ಸಿಕ್ಕತಕ್ಕ ಹುಲ್ಲು ಏನಿದೆ ಅದನ್ನು ಬರಗಾಲ ಪ್ರದೇಶಗಳಿಗೆ ಸಾಗಿಸುವ ಸಾಧ್ಯತೆ ಇರುವುದರಿಂದ ಅಲ್ಲಿ ಫಾಡರ್ ಡೆವಲಪ್ ಮೆಂಟ್ ಕೈಗಾರಿಕೆಯನ್ನು ಇಲಾಖೆಯು ಮುಖಾಂತರ ಮಾಡಿಸಿ ಕೋಲಾರ ಮುಂತಾದ ಮಳೆ ಬಾರದೇ ಇರತಕ್ಕ ಪ್ರದೇಶಗಳಿಗೆ ಕಳುಹಿಸಿ ಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ನಮ್ಮ ಹೊಳೇನರಸೀಪುರಕ್ಕೆ ಒಂದು ಸಿವಿಲ್ ಜಡ್ಜ್ ಕೋರ್ಟ್ ಮಂಜೂರು ಮಾಡುವ ವಿಚಾರ ಏನಾಯಿತು ಎಂಬುದನ್ನು ಮಾನ್ಯ ಕಾನೂನು ಖಾತೆ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಸಚಿವರು ನಾಳೆ ತಮಗೆ ಆ ವಿಚಾರ ತಿಳಿಸುತ್ತಾರೆ.

ವಿಷಯ.— ಮಲಪ್ರಭಾ ನೀರಾವರಿ ಯೋಜನೆಯು ಕೆಳಗಡೆ ಮುಳುಗಡೆಯಾಗುವ ಹಳ್ಳಿ ಪ್ರದೇಶದ ಬಗ್ಗೆ

ಅರ್ಧ ಘಂಟೆ ಕಾಲದ ಚರ್ಚೆ

೬-೩೦ ಪಿ. ಎಂ.

ಶ್ರೀ ಜಿ. ಕೆ. ತಕ್ಕೇಡ್ (ಪರಸಘಡ) - ಮಾನ್ಯ ಉಪಾಧ್ಯಕ್ಷರೇ ಮಲಪ್ರಭಾ ನೀರಾವರಿ ಯೋಜನೆಯು ಕೆಳಗಡೆ ಸುಮಾರು ೪೦ ಹಳ್ಳಿಗಳು ಮುಳುಗಡೆಯಾಗಿವೆ. ಸಾಮಾನ್ಯವಾಗಿ ಈ ಎಲ್ಲ ಹಳ್ಳಿಗಳಿಗೂ ಮೂಲ ಹಳ್ಳಿಗಳಲ್ಲಿದ್ದಂಥ ಎಲ್ಲ ಸೌಕರ್ಯಗಳನ್ನು ಹೊಸ ಊರುಗಳನ್ನು ಕಟ್ಟುವ ಸ್ಥಳಗಳಲ್ಲಿ ಸರ್ಕಾರದವರು ಕೊಡಬೇಕಾಗಿತ್ತು. ೧೯೬೨ನೇ ಇಸವಿಯಲ್ಲಿ ಮುಳುಗಡೆಯಾಗಿದ್ದಂಥ ೪೦ ಹಳ್ಳಿಗಳು ಮತ್ತು ಅರ್ಧಂಬರ್ಧ ಮುಳುಗಡೆಯಾದಂಥ ೨೬ ಹಳ್ಳಿಗಳಿಗೆ ಸರ್ಕಾರದವರು ಸರಿಯಾದ ರೀತಿಯಲ್ಲಿ ರಸ್ತೆಗಳನ್ನು ಮಾಡಿಕೊಟ್ಟಿಲ್ಲ, ಆಸ್ಪತ್ರೆಗಳನ್ನು ಒದಗಿಸಿಕೊಟ್ಟಿಲ್ಲ, ದೀಪದ ವ್ಯವಸ್ಥೆ ಇಲ್ಲ, ಶಾಲೆಗಳನ್ನು ಕಟ್ಟಿಸಿಕೊಟ್ಟಿಲ್ಲ, ಗ್ರಾಮ ದೇವತೆಗಳ ಗುಡಿಗಳನ್ನು ಕಟ್ಟಿಸಿಕೊಟ್ಟಿಲ್ಲ, ಹೆಕ್ಕುಂಡಿಯಲ್ಲಿರತಕ್ಕ ದರ್ಗಾಕ್ಕೆ ೨ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಇಟ್ಟುಕೊಂಡಿದ್ದರೂ ಅದನ್ನು ಕಟ್ಟಿಸಿಕೊಟ್ಟಿಲ್ಲ ಮುಳುಗಡೆಯಾಗಿರುವಂಥ ಸವದತ್ತಿ ಭಾಗದಲ್ಲಿ ಒಟಾಲ್ ಹಡಗಲಿ, ನಡುವನಹಳ್ಳಿ, ಕುಶಾಲಪುರ, ಹೆಕ್ಕುಂಡಿ ಇವೆಲ್ಲಾ ಬರುತ್ತವೆ. ಅಲ್ಲಿ ಇವತ್ತಿನವರೆಗೂ ದೀಪದ ವ್ಯವಸ್ಥೆ ಇಲ್ಲ, ಹಾಗೂ ಇತರೇ ಸೌಕರ್ಯಗಳಿಲ್ಲ ಹಿಂದೆ ವಿಶೇಷ ವಾದ ಸೌಕರ್ಯಗಳನ್ನು ಪಡೆದಿದ್ದ ಹಳ್ಳಿಗಳಾದ ಮಾತ್ರಾಳ, ಹೆಕ್ಕುಂಡಿ ಇವು ನದಿ ದಂಡೆಯ ಮೇಲೆ ಇದ್ದವು. ಜನರು ತಮ್ಮ ಮನೆಯ ರೊಟ್ಟಿ ತಿಂದು ನದಿಗೆ ಹೋಗಿ ನೀರು ಕುಡಿದು ಬರುತ್ತಿದ್ದರು. ಆದರೆ ಇವತ್ತು ಅಲ್ಲಿ ಕುಡಿಯುವ ಪಕ್ಕ ನೀರು ಕೂಡ ಇಲ್ಲ. ೧೯೬೬ರಲ್ಲಿ ಅವರು ಈ ಊರನ್ನು ಬಿಟ್ಟು ಇಲ್ಲಿಗೆ ಬಂದು ನೆಲೆಸಿದ್ದಾರೆ. ಆದರೆ ಇವತ್ತಿನವರೆಗೂ ಕುಡಿಯುವ ನೀರಿನ ಸೌಕರ್ಯ ಇಲ್ಲ. ಇನ್ನೊಂದು ವಿಚಾರ ಏನೆಂದರೆ ಜಮೀನನ್ನು ಹಾಗೂ ಮನೆಗಳನ್ನೂ ಕಳೆದು ಕೊಂಡು ಜನರಿಗೆ ಸರ್ಕಾರದ ವತಿಯಿಂದ ಯಾವುದೇ ಪರಿಹಾರ ಧನವೂ ಇದುವರೆಗೂ ಸಿಕ್ಕಿಲ್ಲ ಎರಡನೆಯದಾಗಿ, ಕೆಲವು ಜನರು ಸರ್ಕಾರಕ್ಕೆ ಮೋಸ ಮಾಡಿ ಬಹಳಷ್ಟು ಹಣವನ್ನು ಪಡೆದಿದ್ದಾರೆ. ಇಲ್ಲಿ ತಾವು ಕೊಟ್ಟಿರತಕ್ಕ ಅಂಕಿಅಂಶದ ಪ್ರಕಾರ ೪,೬೬,೫೮,೬೪೭-೬೫ ಪೈಸೆಯಷ್ಟು ಹಣವನ್ನು ತಾವು ಪರಿಹಾರಧನವಾಗಿ ಇದುವರೆಗೆ ಕೊಟ್ಟಿದ್ದೀರಿ. ಇದರಲ್ಲಿ ಕೆಲವರು ತಮ್ಮ ಜಮೀನನ್ನು ಕಳೆದುಕೊಂಡಿದ್ದೇವೆಂದು ೨ ಸಾವಿರ ರೂಪಾಯಿ ಬೆಲೆಬಾಳ ತಕ್ಕ ಜಮೀನಿಗೆ ಸುಳ್ಳು ಹೇಳಿ ೫-೧೦ ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಪಡೆದಿದ್ದಾರೆ. ಸಿವಿಲ್ ಕೋರ್ಟ್‌ನಲ್ಲಿ ಆದಂಥ ತೀರ್ಮಾನದ ಪ್ರಕಾರ ಸರ್ಕಾರದವರು ಹೈಕೋರ್ಟಿಗೆ ಅಪೀಲು ಹೋದಾಗ ಅಲ್ಲಿ ಒಂದು ಎಕರೆಗೆ ೨ ಸಾವಿರ ರೂಪಾಯಿಯಂತೆ ಅವಾರ್ಡ್ ಪಾಸ್ ಆಗಿದೆ. ಈ ರೀತಿ ಸುಳ್ಳುಹೇಳಿ ಸರ್ಕಾರದಿಂದ ಪರಿಹಾರಧನವನ್ನು ತೆಗೆದುಕೊಂಡಿರುವುದರಿಂದ ಕಾನೂನು ಇಲಾಖೆಯವರು ಸುಮಾರು ಕೋಟಿಗಿಂತಲೂ ಹೆಚ್ಚಿಗೆ ಹಣವನ್ನು ಆ ಜನರಿಂದ ವಸೂಲ್ಮಾಡಬೇಕಾಗಿದೆ. ಕೆಲವು ಜನರಿಗೆ ೮-೧೦ ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಿಸಬೇಕಾದರೆ ಅಲ್ಲಿ ಹೆಚ್ಚಿನ